# ಕೊರವಂಜಿ



*Koravanji*

ಮಾರ್ಚಿ

೧೯೫೭

★

ಸಂಪಾದಕರು :

ಶ್ರೀ|| ರಾ. ಶಿ.

## ಚುನಾವಣಾ ಸಂಚಿಕೆ

ಬಿಡಿ ಪ್ರತಿ


For 3 way Beauty Treatment....
RAJA
SNOW
AMLA HAIR OIL , KASTURI SOAP
MANYAM & CO . BANGALORE MADRAS MADURAI BOMBAY.
TAS

ಮಾರ್ಚಿ ತಿಂಗಳ ಕೊನೆಯ ವಾರದಲ್ಲಿ

ಕರ್ನಾಟಕದಾದ್ಯಂತ ಪ್ರದರ್ಶನಕ್ಕೆ ಬರಲಿದೆ



# ಕೊರವಂಜಿ

A. ANANTHIAH.

ಸಂಪುಟ ೧೬ ಮಾರ್ಚಿ ೧೯೫೭ ಸಂಚಿಕೆ ೧೨

## ಆಯ್ಕೆಯ ಭರಾಟೆಯಲ್ಲಿ

ಪ್ರಧಾನ ಸಚಿವರು ಕಲ್ಲಿಗೆ ಚಿತ್ರವನ್ನು ಕೊರೆಯುತ್ತಿರುವರಂತೆ!!!

* * *

ಆರೋಗ್ಯ ಸಚಿವರು ಮಲೆನಾಡಿನಲ್ಲಿ ಚುನಾವಣಾ ಸಭೆಗಳನ್ನು ನಡೆಸುತ್ತಿರುವರಂತೆ!!

* * *

ಆರ್ಥಿಕ ಸಚಿವರು ದರೋಡಸ್ಥಾನದಲ್ಲಿ ಓಟು ಬೇಡುತ್ತಿರುವರಂತೆ!

* * *

ಕಾರ್ಮಿಕ ಸಚಿವರು ಕುಂಭಕರ್ಣನ ಚಿಹ್ನೆಯನ್ನು ಉಪಯೋಗಿಸಿಲ್ಲವಂತೆ!

" * *

ಕೈಗಾರಿಕಾ ಮಂತ್ರಿಗಳು ಕೈಗೆ ಬೆಣ್ಣೆ ಹಚ್ಚಲು ಮಂಡ್ಯಕ್ಕೆ ಹೋಗಿದ್ದಾರಂತೆ!!!

* * *

ವಿದ್ಯಾಮಂತ್ರಿಗಳು ಶಾರದೆಯ ಶೃಂಗೇರಿಕ್ಷೇತ್ರದಲ್ಲಿ ಅವಿರೋಧರಾಗಿ ಆಯ್ಕೆಯಾದರಂತೆ!

* * *

ವಾಣಿಜ್ಯ ಸಚಿವರು ತೆರೆಮರೆಯಲ್ಲೇ ಆಯ್ಕೆಗೆ ಆಸೆಪಟ್ಟಿದ್ದಾರಂತೆ!

* * *

ಅರಣ್ಯಾಸಚಿವರು ರೋದನಪುರದಲ್ಲಿ ಅಭ್ಯರ್ಥಿಗಳಾಗಿದ್ದಾರಂತೆ.

* * *

ಗ್ರಹಸಚಿವರು, ದಶಮ ಸ್ಥಾನದಲ್ಲಿ ಚುನಾವಣೆಗೆ ನಿಂತಿದ್ದಾರಂತೆ!

* * *

ಉತ್ಪನ್ನ ಮಂತ್ರಿಗಳು ವಿದುರಾಶ್ವತ್ಥದ ಕ್ಷೇತ್ರದಲ್ಲಿ ಅಭ್ಯರ್ಥಿಗಳಾಗಿ ಚುನಾವಣೆಗೆ ನಿಂತಿಲ್ಲವಂತೆ!!

# ಕುಹಕಿಡಿಗಳು

ಕಾಶ್ಮೀರದ ಶಾಲಿನಲ್ಲಿ ಈಗೀಗ ಏಕೋ ಕೋಲಾರದ ಕಂಬಳಿಯಲ್ಲಿರುವಂತೆ ಗಂಟು ಗಂಟು ಸಿಕ್ಕಿ ಮೈ ತರಚಲು ಶುರುವಾಗಿದೆಯಂತೆ.

*　　　*　　　*

ಸಂಸ್ಕೃತ ಕವಿಸಾಪನ್ನಿನವರಿಗೆ ದ್ರಾವಿಡ ಕಜಗಂರವರು ಅರ್ಪಿಸ ಹೇಳಿಕೆಯನ್ನು ಈಗ ತರ್ಜುಮೆ ಮಾಡಿಸುತ್ತಿದ್ದಾರಂತೆ, ರಾಜಾಜಿಯ ಕೈಲಿ; ಎನ್ನುವ ಸುದ್ದಿ ಸುಳ್ಳಂತೆ.

*　　　*　　　*

ಅಣುಬಾಂಬಿನ ಪರೀಕ್ಷಾಪ್ರಯೋಗಗಳನ್ನು ಬಿಕಿನಿ, ಕ್ರಿಷ್ಟಿಯನ್ ದ್ವೀಪಗಳಲ್ಲಿ ನಡೆಸಬಾರದೆಂಬ ತುರ್ತು ಆಕ್ಷೇಪಣಗಳು ಹಲವಾರು ರಾಷ್ಟ್ರಗಳಿಂದ ಬಂದ ಕಾರಣ ಕಾಶ್ಮೀರದಲ್ಲಿ ಏನಾದರೂ ನೆಪ ಹೂಡಿ ನಡೆಸೇಬಿಡೋಣ ಎಂಬ ಅಭಿಪ್ರಾಯದಿಂದ ಅಮೇರಿಕಾ ವರ್ತಿಸುತ್ತಿದೆ ಎನ್ನುವುದು ಶುದ್ಧ ಕುಹಕ.

*　　　*　　　*

"ಬ್ರಿಟನ್ ಅಮೇರಿಕಾ ಮೇಲೆ ಪಾಕ್ ಆಕ್ರೋಶ" ಪತ್ರಿಕೆ)

ವೆತ್ತಲೆ ಚುನ್ನಾಂ ಮೇಲೈ ನಂಬ 'ಪಾಕ್' ಆಕ್ರೋಶ.

(ಮು. ದ್ರಾ. ಕ. ಹೇಳಿಕೆ)

*　　　*　　　*

"ಲೋಕ ಪ್ರಸಿದ್ಧವಾದ....ಕಲ್ಲುಚಪ್ಪಡಿಗಳನ್ನೇ ಉಪಯೋಗಿಸಿ.

(ಜಾಹಿರಾತು)

"ಈ ಗುರ್ತಿಗೇ ಓಟುಕೊಡಿ" (ಜಾಹಿರಾತು)

—ಪಕ್ಕಪಕ್ಕದಲ್ಲಿ ಪ್ರಕಟವಾಗಿರುವುದು ಸಹಜ!!

*　　　*　　　*

ಕಾರ್ಖಾನೆಗಳ ಉತ್ಪನ್ನಬಲು ಹೆಚ್ಚಾಗಬೇಕು ಎಂದು ನೆಹ್ರೂಜಿ ಆಶಿಸಿದರಂತೆ.

—ಕಾರ್ಮಿಕರ ಉತ್ಪನ್ನ ಅದೇ ರೀತಿ ಮಿತವಾಗಬೇಕು ಎಂದು ಅವರು ಆಶಿಸಿದುದು ಪ್ರಟಕವಾಗಿಲ್ಲವಂತೆ.

*　　　*　　　*

# ಉರಿಗಾಳು

ಮಹಾ ಚುನಾವಣೆಯಲ್ಲಿ ಗೆದ್ದು ಸ್ಥಾನಗಳಿಸಿದವರೆಲ್ಲರೂ ತಮ್ಮ ಪ್ರತಿಸ್ಪರ್ಧಿಗಳಿಗೆ ಚಿರಋಣಿಗಳಾಗಿರಬೇಕೆಂದು ದೊಡ್ಡವರೊಬ್ಬರು ತಿಳಿಸುತ್ತಾರೆ.... ಏಕೆಂದರೆ, ಅವರು ಗೆದ್ದದ್ದು, ಅಂತಹ ಪ್ರತಿಸ್ಪರ್ಧಿಗಳಿದ್ದದ್ದರಿಂದಲೇ.

*　　　*　　　*

ಮಸಿ ಹಚ್ಚುತ್ತಾರೆ ಎಂದು ಕೇಳಿದಾಗ, ವೋಟು ಮಾಡುವಕಡೆಗೆ ಹೊರಡದಿದ್ದ ಒಬ್ಬರು, ಮುಖಕ್ಕಲ್ಲ ಅಂದಮೇಲೆ, ಪ್ರಯಾಣ ಮುಂದುವರಿಸಿದರಂತೆ.

*　　　*　　　*

ದೂರು ಕೊಟ್ಟವನು ದುಶ್ಶಾಸನ; ದರೋಡೆ ಮಾಡಿದವನು, ಧರ್ಮರಾಯ, ಎಂಬುದೇ ಯೂಎನ್ನೊ ತೀರ್ಪು.

*　　　*　　　*

ಖಾಲಿ ಪೆಟ್ಟಿಗೆ ನೆಚ್ಚಿಕೊಂಡು, ಗಾಳಿಗೋಪುರ ಕಟ್ಟಿ, ಕೋಳಿ ಕಾಳಗಕ್ಕಿಳಿದ ನಂತೆ, ಒಬ್ಬರು ಪುಣ್ಯಾತ್ಮರು.

*　　　*　　　*

ಜ್ಯೋತಿಷ ಶುದ್ಧ ಸುಳ್ಳು, ಅಂತ ಚುನಾವಣೆಯಲ್ಲಿ ಸೋತವರೆಲ್ಲರೂ ಪ್ರಚಾರ ಮಾಡಲು ಯತ್ನಿಸುತ್ತಾರಂತೆ. ಆದರೆ, ಆ ಜೋಯಿಸರುಗಳು ಹೇಳುತ್ತಾರೆ: ಎಂಥ ಮುಹೂರ್ತದಲ್ಲಿ ನಾವು ನಿಜವಾದ ಭವಿಷ್ಯ ನುಡೀತೇವೆ ಅಂತ ಅವರು ಜೋತಿಷ್ಯ ಕೇಳಿ ತಿಳಿದುಕೊಂಡು, ಅನಂತರ ನಮ್ಮ ಹತ್ತಿರಕ್ಕೆ ಬರಬೇಕಾಗಿತ್ತು.... ಅವರು ಬಂದಾಗ, ಸುಳ್ಳನ್ನೇ ಹೇಳುತ್ತೀರಿ, ಅಂತ ನಮ್ಮ ಜಾತಕದಲ್ಲಿ ಬರೆದಿತ್ತು, ಅದಕ್ಕೆ ನಾವೇನು ಮಾಡೋಣ, ಅಂತ.

*　　　*　　　*

ಚುನಾವಣೆಯಲ್ಲಿ ಸೋತ ಹಲವರು ತಮ್ಮ ಸ್ವಂತ ಖರ್ಚಿನಿಂದಲೇ ಇನ್ನು ಕಾಶಿ ರಾಮೇಶ್ವರ ಹೋಗಿ ಬರಲು ನಿಶ್ಚಯಿಸಿದಾರಂತೆ.... ತಿರುಪತಿಗಂತೂ, ಹೋಗಬೇಕಾಗಿಯೇ ಇಲ್ಲವಲ್ಲಾ.

*　　　*　　　*

ಚುನಾವಣೆ ಫಲಿತಾಂಶ ಹೊರಬಿದ್ದ ತಕ್ಷಣವೇ, ಗೆದ್ದವರ ಹೆಣ್ಣುಮಕ್ಕಳಿಗೆ ವರಗಳನ್ನು ನಿರ್ಧರಿಸುವ ಕೆಲಸ ಸುಗಮವಾಯಿತು .... ಹೌದು! ಸೋತವರ ಅಳಿಯಂದಿರಾಗಲು ಯಾರುತಾನೆ ಬಯಸುತ್ತಾರೆ?

*　　　*　　　*

ತಮಗೆ ಮತದಾನವಿತ್ತರೆ, ಮದುವೆಯನ್ನೂ ಸಹ ಮಾಡಿಸಿಕೊಡುತ್ತೇವೆ ಎಂದು ಹಲವು ಉಮೇದುವಾರರು ಆಶ್ವಾಸನ ಕೊಡುತ್ತಿರುವರಂತೆ ... ಇದರಿಂದ, ವಿವಾಹಿತ ರನೇಕರ ಮತ ಅವರಿಗೆ ದೊರೆಯಬಹುದೆಂದು ನಿರೀಕ್ಷಿಸಲಾಗಿದೆ.

* * *

ಅಮೇರಿಕಾದಿಂದ ಪಾಕಿಸ್ತಾನ ಸರ್ಕಾರ ಅಣುಶಸ್ತ್ರಗಳನ್ನು ಪಡೆದಿದೆಯಂತೆ.... ಅದಕ್ಕೇ ಅಮೇರಿಕಾದವರು ಆಗಲಿಂದ ನಮಗೆ ಹೇಳುತ್ತಿರುವುದು, "ನಾವು ಪಾಕಿಸ್ತಾನಕ್ಕೆ ಅಣು ಮಾತ್ರ ಶಸ್ತ್ರಸಹಾಯಮಾಡುತ್ತಿದೇವೆ" ಎಂದು ... ನಾಳೆ ಕದನ ವಾದರೆ, ಅಣೋರಣೀಯಾನ್ ಒಂದುಕಡೆ, ಮಹತೋ ಮಹೀಯಾನ್ ಒಂದುಕಡೆ.

* * *

ಜನತೆಯ ದೃಷ್ಟಿಯನ್ನು ಪುಟಗೊಳಿಸುವ ನೇತ್ರ ವೈದ್ಯರ ಸಮ್ಮೇಳನ ಬೆಂಗಳೂರಲ್ಲಿ ಸಮಾವೇಶಗೊಂಡಿದ್ದಕ್ಕೂ, ಮಹಾಚುನಾವಣೆ ಸಮಾರಂಭಕ್ಕೂ, ಯಾವ ಸಂಬಂಧವನ್ನೂ ಕಲ್ಪಿಸಬಾರದೆಂದು ಕೇಳಿಕೊಳ್ಳಲಾಗಿದೆ.

* * *

ಭಾಷಣದ ಕೊನೆಯಲ್ಲಿ, ಭಾಷಣಕಾರರು ಭಾಷಣಗಳ ಯುಗ ಮುಗಿಯಿತೆಂದೂ ಇನ್ನುಮುಂದೆ ಭಾಷಣಮಾಡುವುದನ್ನು ನಿಲ್ಲಿಸಿ ಜನ ಕಾರ್ಯರಂಗಕ್ಕಿಳಿಯಬೇಕೆಂದು ಹೇಳಿ, ಭಾಷಣಗಳಿಂದಾಗುವ ಅನಾಹುತಗಳನ್ನು, ಶ್ರೋತೃಗಳ ಕರತಾಡನಗಳ ಮಧ್ಯೆ ವಿವರಿಸಿದರು (ವರದಿ) ಶ್ರೋತೃಗಳು ಏಕೆ ಕರತಾಡನ ಮಾಡಿದರೆಂಬುದನ್ನು ನಾವು ಬಲ್ಲೆವು. ಆತನಿಗೆ ತಿಳಿಯಲಿಲ್ಲ, ಪಾಪ.

* * * * * * * * * * * * * * * *

ಇಂಗ್ಲೆಂಡಿನಲ್ಲಿ ಗಂಟಲಲ್ಲಿಳಿಯಲಾರದ ಉಪ್ಪೇರಿ ಚೂರುಗಳನ್ನು ನಾಸರ್ ಉಪ್ಪೇರಿ ಎಂದು ನಾಮಕರಣ ಮಾಡಿದ್ದಾರೆಂಬುದು ಖಚಿತವಲ್ಲವಂತೆ!!

* * *

ಕಾಶ್ಮೀರದ ಸಮಸ್ಯೆಯ ಶಾಂತಿ ಪರಿಹಾರಕ್ಕಾಗಿ ಶ್ರೀ ಜಾರಿಂಗ್‌ರವರು ಬರುವರಂತೆ.

— ಸಂಸ್ಕೃತದ ಹೆಸರಾದರೆ ಯಾವ ಹೊತ್ತಿನಲ್ಲೂ ಜಯ ಸಾಧ್ಯ!

ಕನ್ನಡದ ಹೆಸರಾದರೆ ಯಾವ ಹೊತ್ತಿನಲ್ಲೂ 'ಅವರಿಗೆ' ವೈಯಕ್ತಿಕ ಜಯ!

ಅವರ ಭಾಷೆಯ ಸ್ವಂತ ಹೆಸರಾದರೆ, ಕರಕರ, ಖಂಡಿತ.

* * *

ಯುನೋ ಕಚೇರಿಯ ಬಾಗಿಲುಗಳನ್ನು ನಮ್ಮ ಊರಿನ ಬಡಗಿಗಳೇ ಮಾಡಿ ಕೊಟ್ಟರಂತೆ.

— ಕಾರಣ! ಯಾವ ಕಾಲದಲ್ಲೂ ಆ ಬಾಗಿಲುಗಳನ್ನು ಪೂರ್ಣ ಮುಚ್ಚಲು ಅಸಾಧ್ಯವಾಗಿರಲೆಂದೇ!! ನಮ್ಮೂರು ಶಾಂತಿಗ್ರಾಮ!!"

— o —



ಈರುಳ್ಳಿ ಹುಳಿ ಹುರುಳಿ ಹಪ್ಪಳ ಬಲು ಚೆನ್ನಾಗಿದೆ ಕಣೇ !!
—ಅಂದಮೇಲೆ ನನ್ನ ತಮ್ಮನಿಗೇ ಓಟು ಕೊಡುತ್ತೀರಾ! ಅಂದ್ರೇ !!



ಪುಣ್ಯ–ಮತಿ ಇದ್ದವರಿಗೇ ನಿಮ್ಮ ಓಟು
ಎಂದು ರಾಜಾಜಿ ಹೇಳಿಕೆಯಿತ್ತಿದ್ದಾರೆ.

# ಅಪರಂಜಿ ವಚನಗಳು

ಎಳ್ಳಿಲ್ಲದ ಗಾಣವನಾಡಿದ ಮಿಲ್ಲಿನಂತಾಯಿತೆನ್ನ ಬದುಕು; ಮುಳ್ಳಿಲ್ಲದ ಬೇಲಿಯ ದೆಂತು ಕಾವುದು ಹೊಲವ? ಸುಳ್ಳಿಲ್ಲದ ರಾಜಕಾರಣಿಯುದೆಂತು ಗೆಲ್ಲುವನಯ್ಯ? ಸುಣ್ಣ ವಿಲ್ಲದ ವೀಳ್ಯವದೆಂತು ರಂಗಿಪುದು ತುಟಿಯು? ಬಣ್ಣವಿಲ್ಲದ ರೀಲದೆಂತು ಕಣ್ಣಿಗಿಂಪ ಕೊಡುವುದಯ್ಯ? ಎಣ್ಣೆಯಿಲ್ಲದ ಬಾಚು, ಮುಳ್ಳ ಇಲ್ಲದ ವಾಚು, ಸೊಳ್ಳೆ ಇಲ್ಲದ ರಾತ್ರಿ, ಕಳ್ಳರಿಲ್ಲದ ಜೈಲು, ತಣ್ಣಗಿರುವಾ ಕಾಪಿ, ಖಾರವಿಲ್ಲದ ಸುದ್ದಿ, ಕುನ್ನಿಯಿರದಿದ್ದರೂ ಬಾಗಿಲಲಿ ನಾಯಿಗಳಿವೆಯೆಂಬ ಬೋರ್ಡು, ಬರಿ ಬರಡು, ಹೇಳಿದಳು ನಮ್ಮ ಕೊರವಂಜಿ ಕಾಯುವಪರಂಜಿದೇವಿ.

ಚುನಾವಣೆ ಉದಯು ವ್ಯೆಕ ಮಾಲೀಕನಿಗೆ ಜೀವಾಳ; ಹಳೆಯ ಕಾರುಗಳ ಹಾರಾಟ; ಕೆಟ್ಟಗಂಟಲುಗಳ ಕೂಗಾಟ; ಬಡವರ ಮನೆ ಹೊಸಲಲ್ಲಿ ಸಿರಿವಂತರ ಸಡಗರ; ನಾನು ತಾನೆನ್ನುತ್ತ ಮೀನು ಹಿಡಿಯುವರಯ್ಯ! ಎಲ್ಲರಿಗು ಹೂಂ ಎಂದು, ಹಲ್ಲು ಕಿರಿಯುತಲಿದ್ದು, ಮೆಲ್ಲನೇ ಬಲ್ಲವಗೆ ಮತವಿತ್ತು ಉಳಿದರ್ಗೆ ಬತ್ತಿ ಇಡುವವನೇ ಹತ್ತುಜನರಲಿ ಜಾಣ, ಸುತ್ತುಜನರಲಿ ಮುತ್ತು; ಮೆದುಳನಡವಿಡದೆ, ನಾಡ ಶಿರಬರಹವನು ಕಾಡಿದವಗೆ ಕೊಡುವರಯ್ಯ, ತಿದ್ದಲೆಂದು. ಬೇಡಿದವರಿಗೆ ಕೊಡುವರಯ್ಯ, ಬೀಡಿಯಂತೆ. ಕೂತು ಚಿಂತಿಸಿ, ನಿಂತು ಪರಿಕಿಸಿ, ನಡೆಯು ಟೀಕಿಸಿ, ಟೊಳ್ಳು ಗಟ್ಟಿಗಳ ಬೇರಿರಿಸಿ, ಬೂತೊಳಗೆ ನುಗ್ಗೆಂದಳು, ಕೊರವಂಜಿ ಕಾಯುವಪರಂಜಿದೇವಿ.

ಆಡಿದರೇನು? ಕಾಡಿದರೇನು? ಬೇಡಿದರೇನು? ಕೈಯ ನೀಡಿದರೇನು? ಕಾರಲ್ಲೋಡಿದರೇನು? ಕಣ್ಣಲ್ಲಿ ಕರುಣೆ ಬಾಯಲ್ಲಿ ವಿನಯ, ಬುರುಡೆಯಲಿ ಬುದ್ಧಿ ಇಲ್ಲದನ್ನಕ್ಕ? ಆಡದೆ ನವಿಲು? ಕಾಡದೆ ಶುನಕ? ಬೇಡದೆ ಕಾಗೆ? ಕೈಯನೀಡದೆ ಕಪಿ? ಕಾರಲ್ಲೋಡದೆ ಕಾರ್ಬೇರಿಯನ್ನರು? ಕರುಣೆ ಇರಬೇಕು, ಕಷ್ಟಕ್ಕೊಳಗಾದ ವರಲ್ಲಿ. ವಿನಯ ಇರಬೇಕು ವಿಸ್ತರದುಪನ್ಯಾಸದಲಿ. ಬುದ್ಧಿಯೇ ಸಿದ್ಧಿಯ ಮೂಲ ವಯ್ಯಾ, ಹೇಳಿದಳು ನಮ್ಮ ಕೊರವಂಜಿ ಕಾಯುವಪರಂಜಿದೇವಿ.

ಮ್ಯಾಥಮಾಟಿಕ್ಸ ಮೆಲಿದರೆ, ಮೆಲಿದಂತಲ್ಲದೆ, ಮಾನವನ ಮದಮೋಹ ಮತ್ಸರಗಳನೆಂತರಿವರಯ್ಯ? ಭೂತಶಾಸ್ತ್ರವ ಮೆಲಿದರೆ, ಮೆಲಿದಂತಲ್ಲದೆ, ಮಾನವನ ಭೂತ ಭವಿಷ್ಯ ವರ್ತಮಾನಗಳನೆಂತರಿವರಯ್ಯ? ರಸಾಯನ ಶಾಸ್ತ್ರವ ಮೆಲಿದರೆ, ಮೆಲಿದಂತಲ್ಲದೆ, ಶಾಂತ ಕರುಣಾ ಶೃಂಗಾರ ಹಾಸ್ಯ ಭೀಬತ್ಸರಸಗಳನೆಂತಾಸ್ವಾದಿಪರಯ್ಯ? ಪ್ರಾಣಿಶಾಸ್ತ್ರವ ಮೆಲಿದರೆ, ಮೆಲಿದಂತಲ್ಲದೆ, ಕರಡಿ ಹುಲಿ ಹಾವುಗಳನೊಳಗಿರಿಸಿ ನಕ್ರ ತೋಳ ಸರ್ಪಗಳನನುಕರಿಸಿ ಮೆರೆವ ಈ ಮಾನುಷ ಪ್ರಾಣಿಯನೆಂತರಿವರಯ್ಯಾ?, ಹೇಳಿದಳು ನಮ್ಮ ಕೊರವಂಜಿ ಕಾಯುವಪರಂಜಿದೇವಿ.

— ೦ —

# ಚುನಾವಣಾ !

ಚುನಾವಣಾ ಬಂತು ನಾಡಿಗೆ !
ಬಂತು ಬೀಡಿಗೆ !
ಬಂತು ಬೀದಿಗೆ!
ಚುನಾವಣಾ ಬಂತು !

ಕದಡಿ ಬಂತು ಚು ನಾವಣಾ !
ಕುಣಿದ್ಹಾಂಗ ರಾವಣ !
ಕುಣಿತಾವ ಗಾಳಿ !
ಜೈ ರವದ ರೂಪತಾಳಿ !


ಚುನಾವಣಾ ಬಂತು ಘಟ್ಟಕ್ಕ |
ರಾಜ್ಯಪಟ್ಟಕ್ಕ
ಬಾನಮುಟ್ಟಕ್ಕ
ಏರ್‍ಯಾದ ಮುಗಿಲು | ಭುವಿಕಾಣೆ ಹಾಡೆಹಗಲು |

ಚುನಾವಣಾ ಬಂತು ಹೋಟಲಿಗೆ |
ಅದೇ ಶುಭ ಗಳಿಗೆ |
ಹೋಳಿಗೆ ಮತ್ತು ಕೋಳಿಗೆ
ಆಗ್ಯೇದ ಲಗ್ನ | ಅದರಾಗ ಜನರು ಮಗ್ನ |

ಚುನಾವಣಾ ಬಂತು ಊರಿಗೆ |
ಕೇರಿ ಕೇರಿಗೆ |
ಹೊಡೆದ ಝೋರಿಗೆ
ಜೋಕಾಲಿ ಏರಿ | ಅದುರಾವ ಕನಕ ಹಾರಿ |

ಚುನಾವಣಾ ಬಂತು ಮನಿಮನಿಗೆ |
ಕೂಡಿ ದನಿ ದನಿಗೆ |
ಗೆಲುವ ದನಿ ಕೊನಿಗೆ
ಒಡೆದಾವ ಹಾಡೂ | ಕಸ ಉಕ್ಕತಾವ ನೋಡು |

ಚುನಾವಣಾ ಬಂತು || ೧ ||



ಜಟ್ಕ ತೊಟ್ಟಾನ ಪೋಸ್ಟರಿನ ಅಂಗಿ
ಕೆಸರ ನೋಡ ತಂಗೀ
ಹೊರಟಾವೆಲ್ಲೋ ಜಂಗೀ!
ಜಾತ್ರಿಗೇನೋ। ಹಣ್ಣಾದುವಲ್ಲೆತಾನೋ!

ಮನೆಗೋಡೆ ನೋಡು ಈಗ ಹ್ಯಾಂಗ
ಮದುವಿ ಮಗನ್ಹಾಂಗ
ತಲೆಗೆ ಬಾಸಿಂಗ
ಕಟ್ಟಿಕೊಂಡು ನಿಂತಾವ ಬೆದರಿಕೊಂಡು।

ಬಲು ಸಿಟ್ಟ ಹಣಗಾರನ್ಹಾಂಗ
ನೆಲಾ ನಿಲೆ ಹ್ಯಾಂಗ
ಬರಿ ಮುಸಿ ಬಳಿದ್ಹಾಂಗ
ಸೊಕ್ಕುತಾವ। ಇಂಗಾಲ ಕಕ್ಕುತಾವ।

ಚೌಕ ಚೌಕ ಸಾವಿರ ಭಂಟ
ಅವಗೆಲ್ಲಾ ಆಣೆ ಎಂಟ
ಸುರಿತಾನೋ ನಿಂದ ನಂಟ
ಕೂಡ್ಯಾವ ಸಂತೆ | ಸುತ್ತೆಲ್ಲ ನೋಡ ನೋಡ |

ನಾಡೆಲ್ಲ ಭೇರಿಯು ಸಾರಿ
ಹರಿತಾವ ಝುರಿ
ಮಾತನ್ನ ತೋರಿ
ಈಗ ಯಾಕ ಜನಕೆಲ್ಲ ಕುಡಿಸಲಾಕ |
ಚುನಾವಣಾ ಬಂತು || ೨ ||

ಜನದ್ಕುಲ ಹೂಡಿದಾ ವೋಸ |
ಕಟ್ಟಿ ನೂರು ವೇಷ
ಕೊಟ್ಟ ಸಂತ್ರಾಸ
ಕುಣಿಸ್ತದ | ತಾನ ದಣಿತಾದ

ಚುನಾವಣಾ ಬಂತು ನಾಡಿಗೆ | ಬಂತು ಬೀಡಿಗೆ |
ಬಂತು ಬೀದಿಗೆ | ಚುನಾವಣಾ ಬಂತು ||

(ಶ್ರೀ ಬೇಂದ್ರೆಯವರಲ್ಲಿ "ಶ್ರಾವಣ"ದ ಕ್ಷಮಾಪಣೆಗಳೊಂದಿಗೆ)

---

ಶ್ರೀ ಕೃಷ್ಣಮೆನನ್‌ರವರು ಯೂನೋದಲ್ಲಿ ನ್ಯಾಯ ಶಾಂತಿ ಸಂಧಾನಮಾಡ ಲೋಸುಗ, ದ್ವಾಪರದಲ್ಲಿ ನಡೆದಂತೆಯೇ ಅತಿಯಾಗಿ ಶ್ರಮಿಸಿದುದರಿಂದ, ಅದೇ ತೆರನ ಫಲಿತಾಂಶವು ದೊರಕಿತಲ್ಲವೇ?

* * *

"ತ್ಯಾಗ ಬುದ್ಧಿ ; ದೈವಭಕ್ತಿಗಳ ಸಮ್ಮಿಳನವೇ ಉದ್ಧಾರದ ಮಾರ್ಗ ! !"— ದೇವಸ್ಥಾನದ ಅಂಕುರವಾದಾಗ ರಾಜ್ಯಪಾಲರ ಹೇಳಿಕೆ.

—"ಅದಕ್ಕೇ, ನಮ್ಮ ಚುನಾವಣಾ ಕ್ರಮದಿಂದ, ನಮ್ಮ ಸ್ವಂತ, ದೇವರ ಅಭ್ಯುದಯಕ್ಕಾಗಿ, ನಾವೂ ಚುನಾವಣಾ ವಿರಾಮ ಪಡೆದೆವು" ಎಂದು ಪುಢಾರಿಗಳು ಹೇಳಿದುದು ಸತ್ಯವಂತೆ ! !

* * *

# ಕುಶಲವೆ ?

"ನಮಸ್ಕಾರ ಯಜಮಾನ್ರಿಗೆ"

—ಎಂದಾಗ ಹಾಗೇ ಬೀಳುವಂತಾಯ್ತು. ಈ ಕೊಂಪೆಯಲ್ಲಿ ನನ್ನ ಯಜಮಾನ್ರು ಅಂದವರು ಯಾರು? ಎಂದು ಆಶ್ಚರ್ಯಪಟ್ಟೆ. ಹಿಂದಿರುಗಿ ನೋಡಿದಾಗ—ಎಲ್ಲಿಯೋ ನೋಡಿದ ನೆನಪು. ಎಲ್ಲೋ ಕೇಳಿದ ಪರಿಚಿತ ಧ್ವನಿ.

"ಯಾಕೆ ಸ್ವಾಮಿ ಗುರ್ತು ಸಿಗಲಿಲ್ವೆ?"

ಮತ್ತಷ್ಟು ಹತ್ತಿರ ಬಂದು ಕಣ್ಣು ಆವರಿಸಿದ ಬಣ್ಣದ ಕನ್ನಡಕ ತೆಗೆದು ಹೊಳೆದ ಹಲ್ಲು ಬೀರಿ ಹೇಳಿತು ನನ್ನ ಗುರ್ತಿಸಿದ ವ್ಯಕ್ತಿ. ಹೌದು ಈ ಧ್ವನಿ ಪರಿಚಿತ, ಆತ್ಮೀಯವಾಗಿ ಮಾತಾಡಿದ್ದುಂಟು ಈ ಧ್ವನಿ. ಹಿಂದೆ ಐದುವರ್ಷದ ಹಿಂದೆ ಧ್ವನಿವರ್ಧಕ ಮರ್ಧಿಸುವಂತೆ ಬೇಧಿಸಿ ಈ ಧ್ವನಿ ಬಂದಿದ್ದು ಕಿವಿಗೆ ಗುಂಡಿಟ್ಟಂತೆ ಅನ್ನಿಸಿದ್ದು ನೆನಪಿಗೆ ಬಂತು.

—ಮೊಳಗಿತ್ತು ಈ ಮಹನೀಯನ ಮಾತು........ತುಂಬಿದ ಸಭೆಯಲ್ಲಿ ಅಂದು ಐದುವರ್ಷದ ಹಿಂದೆ ಮಳೆಗರೆದಂತೆ ಗುಡುಗಿದ್ದು........ಮತ್ತೆ ಕೇಳಿದಂತಾಯಿತು ಇವನನ್ನು ನೋಡಿದಾಗ.

ಅವನೆಂದಿದ್ದ—

"...ದೀನದಲಿತರ ಕಷ್ಟ-ರೋಗರುಜಿನುಗಳ ಕಾಟ-ಅನಕ್ಷರತೆಯ ಅನಾಹುತ—ರಕ್ತ ಕುದಿಯುತಿದೆ ಗೆಳೆಯರೆ. ಸತ್ಯ-ಧರ್ಮ—ಅಹಿಂಸೆಯೇ ಊರುಗೋಲಾದ ನಮಗೆ ನಿಮ್ಮ ಕಷ್ಟಗಳೇ ಆಸರೆ. ಮಹಾತ್ಮ ಗಾಂಧೀಜಿಯವರು ಹೇಳಿದ ಹಾದಿಯಲ್ಲೇ ನಾವು ಹೋಗಿ ಜೈಲು ಕಂಡೆವು—ಜೈಲಿನಿಂದ ಬಂದವರೇ ಮೆಂಬರಾದೆವು—ಮೆಂಬರಾದವರೇ ಸೇವೆಗೆ ನಿಂತೆವು— ನನ್ನ ಉಸಿರು ಸೇವೆ—ಜೀವ ಸೇವೆ—ಸೇವೆ, ಸೇವೆ...."

—ಎಂದಾಗ ಕಿರಿಯನೊಬ್ಬ ಖಾರಾಸೇವೆ ಎಂದಿದ್ದ. ಜನ ನಕ್ಕಿದ್ದರು. ಮತ್ತೆ ಅವನು ಎತ್ತರದ ಧ್ವನಿಯಲ್ಲಿ ಕೂಗಿದ್ದ.

"ನಗುವ ವಿಚಾರವಲ್ಲ ಇದು—ಒಂದು ದೇಶದ ಆಗುಹೋಗುಗಳ ವಿಚಾರ, ವಿನಿಯಮ ಶಿಸ್ತು ಸುಧಾರಣೆಯ ಭಾರ ಹೊರುವ ಕತ್ತು ದೇವರು ನಮಗೆ ದಯಪಾಲಿಸಿ

ದ್ದಾನೆ—ಆದರೆ ಆ ಕತ್ತಿನಮೇಲೆ ನೊಗವನ್ನಿಡುವವರು ನೀವು — ನೀವೆಲ್ಲ ಓಟು ಕೊಟ್ಟರೆ ನೊಗ ಹೊರಿಸಿದಂತಾಗಲಿಲ್ಲವೆ?........ಮಹನಿಯರೇ—ಮಹನಿಯರೇ ಏಳಬೇಡಿ ದಯವಿಟ್ಟು ಕೂಡಿ........ಹತ್ತೊಂಬತ್ತುನೂರಾ ನಲವತ್ತೆರಡರಲ್ಲಿ ನಾನು ಜೈಲಿನಲ್ಲಿದ್ದಾಗ...."

—ಎಂದಾಗ ಅವನನ್ನು ಬಲ್ಲವನೊಬ್ಬ "ಹೌದು ಇವನು ಜೈಲಿಗೆ ಹೋದದ್ದು ಬ್ಲಾಕ್‌ಮಾರ್ಕೆಟ್ಟಿನಲ್ಲಿ ಸಿಕ್ಕಿಬಿದ್ದು—ಸತ್ಯಾಗ್ರಹ ಮಾಡಿಯಲ್ಲ" ಎಂದಿದ್ದ.

"ಅವಿಶ್ರಾಂತ ದುಡಿಮೆಯ ಫಲವಾಗಿ ಜಮೀನಿಲ್ಲದ ಮಂದಿಗೆ ಜಮೀನು ಸಿಕ್ಕಿದೆ"

"—ಹೌದು ಆ ಮಂದಿ ಅವನ ಬಳಗದ ಮಂದಿಯೆ—ಭಾವಮೈದ ಅಣ್ಣನ ಮಗ ಇತ್ಯಾದಿ"

"ನಮ್ಮ ಜನಗಳಿಗೆ ಅನೇಕ ರೀತಿಯ ಸಹಾಯಮಾಡಿದ್ದೇನೆ"

"ಅವನ ಜನ ಅಂದರೆ ಸ್ವಜನ ಅವನ ಕೋಮಿನವರು ಎಂದರ್ಥ"

—ಎಂದೆಲ್ಲ ಪುಂಖಾನುಪುಂಖ ಶಂಖವಾದ್ಯದಂತೆ ಘೋರ್ಗರೆದಿದ್ದ ಅವನ ಭಾಷಣವಾಹಿನಿಯಿಂದ. ಐದುವರ್ಷ ಇವನನ್ನು ಕಾಣಲಿಲ್ಲ. ಎಲ್ಲಿದ್ದನೋ—ಏನು ಸೇವೆ ಮಾಡಿದ್ದನೋ ಷೇವೇ ಮಾಡಿದ್ದನೋ ನಮ್ಮೂರಿನವರು ಅರಿಯೆವು. ನಮ್ಮ ಹಳ್ಳಿ ಮಾತ್ರ ಆಗಿದ್ದಂತೆ ಈಗಲೂ ಇದೆ. ಒಂದೇ ವ್ಯತ್ಯಾಸ ಆಗ ಎರಡೇ ಪಾರ್ಟಿ ಇತ್ತು ಈಗ ಮೂರು ಆಗಿದೆ ಅಷ್ಟೆ.

"ಇಷ್ಟು ಬ್ಯಾಗನೆ ಮರ್‍ತರೆ ಹ್ಯಾಗೆ?" ಎಂದು ಆ ವ್ಯಕ್ತಿ ಆತ್ಮೀಯತೆಯಿಂದ ಹೆಗಲಮೇಲೆ ಕೈಹೇರಿತು.

"ಆಂ....ಮರೆಯೋದುಂಟೆ?...."

"ಎಲ್ಲಾ ಆರಾಂ ಇದ್ದೀರಾ ಅಣ್ಣಾ"

"ಹೂಂ—ಇದ್ದೀವಿ" ಎಂದು ರಾಗ ಎಳೆದೆ.

"ಯಾಕೆ ರಾಗ ಎಳೀತೀರ"

"ರಾಗವಲ್ಲ ಪದ ಹೇಳ್ತಿದ್ದೀನಿ"

"ನಿಮ್ಮೂರು ಭಾವಿಯಲ್ಲಿ ನೀರು ಸರಿಯಾಗಿ ಬರ್‍ತಾ ಇದೆಯೆ?"

"ಭಾವೀಲಿ ನೀರು ಬರ್‍ತಾ ಇದೆಯೇಂದ್ರೆ ಏನು ಸ್ವಾಮೀ ..."

"ಕ್ಷಮಿಸಿ-ಮರ್ತಿದ್ದೆ ನಿಮ್ಮ ಪಕ್ಕದ ಊರಲ್ಲಿ ನಲ್ಲೀಲಿ ನೀರು ಬರೋಕೆ ನಾನು ಶ್ರಮಿಸಿದ್ದೆ—ಆ ಮಾತಿನ ಗುಂಗಿನಲ್ಲೇ ಇದ್ದೆ ಇಲ್ಲಿ ಭಾವಿ ತೆಗಿಸೋಕೆ ಸಾಲದ ವಿಚಾರ ಹೇಳೋಕೆ ಹೋಗಿ ಭಾವಿಲಿ ನೀರು ಬರುತ್ಯೆ ಅಂದುಬಿಟ್ಟೆ...."

"ಹಸ್ತುಹಸ್ತು . ಸರಿ–ಹೂಂ ಇವೆ ಅರ್ಧಂಬರ್ಧ ತೋಡಿದ ಬತ್ತಿದ ಭಾವಿಗಳು"

"ಛೆ ...ಯಾಕೆ ತಕಾವಿ ಸಾಲ ಕೊಡಿಸಿದ್ದೆನಲ್ಲಾ"

"ಕೊಡಿಸಿದ್ರಿ—ಅರ್ಧ ಭಾವಿ ತೆಗಯೋದ್ರಲ್ಲಿ ಮೊದಲ ಕಂತು ತೀರ್ಕೊಂಡ್ತು ಎರಡನೇ ಕಂತಿನ ಹೊತ್ತಿಗೆ ಸರ್ಕಾರಿ ವರ್ಷ ಮುಗಿತು—ಇನ್ನೂ ಸ್ಯಾಂಕ್ಷನ್ ಆಗಿ ಬರೋದು ನಮ್ಮ ಮೊಮ್ಮಕ್ಕಳ ಕಾಲಕ್ಕೆ ..."

"ಅನ್ಯಾಯ—ಅದನ್ನ ಕೂಡ್ಲೆ ಸರಿಪಡಸ್ತೀನೆ....ಗೊಬ್ರಕ್ಕೆ ಸಕಾಲಕ್ಕೆ ಸಾಲ ಸಿಕ್ತೆ?"

"ಸಿಕ್ತು ಗೊಬ್ರ—ಗಿಡಕ್ಕಲ್ಲ ನಂಮ್ಗೆ"

"ಅದೇನು-ಹಾಗಂತೀರ ಯಜಮಾನ್ರೆ"

"....ಅದೆಲ್ಲ ನಮ್ಮ ಕರ್ಮ ಸ್ವಾಮಿ: ಅದಿರ್ಲಿ ಈಗೇನು ನೀವು ಈಚಿಗೆ ಭಾಳ ನಮ್ಮ ಹಳ್ಳಿ ಸುತ್ತು ಮುತ್ಲು ಸಂಚಾರ ಮಾಡ್ತಿದ್ದೀರಾ"

"ಹಾಗಂದ್ರೇನೊ ಅಣ್ಣಾ—ಹಳ್ಳಿಯ ಜೀವನವೇ ನನ್ನ ಜೀವ....ನೀನು ಓಟು ಕೊಡದೆ ಇದ್ರೆ ನನ್ನ ಭಾಷಣ ಯಾರು ಕೇಳ್ತಾರೆ ಅಣ್ಣಯ್ಯ—ನನ್ನ ಯಾರು ಎಂಎಲ್ಲೇ ಅನ್ನೋರು?"

"ಎಮ್ಮೆಲ್ಲೇ....ಬಿಡ್ತಾನ್ರಿ ನಿಮ್ಮನ್ನ ಯಾರಾರಾ ಯಾಕೆ ಲೇ ಎಮ್ಮೆ ಅನ್ನ ಬೇಕ್ರಿ...."

"ಛಿಛಿ ಎಂಎಲ್‌ಎ ಅಂದ್ರೆ ಮೆಂಬರಪ್ಪ ಐದು ವರ್ಷದ ಹಿಂದೆ ನೀವೆಲ್ಲಾ ಓಟು ಕೊಟ್ಟೆ ನನ್ನ ಒಂದು ಮೂರ್ತಿ ಅಂತ ಮಾಡಿ ನಿಮ್ಮಗಳ ಪರವಾಗಿ ಅಸೆಂಬ್ಲೀಲಿ ನಾನು ಕೈ ಎತ್ತಲ್ವಿಲೇ...."

"ಓಹೊಹೊ....ಮಸಿಚುಕ್ಕೆ ಕೈಮ್ಯಾಲಿಟ್ಟೆ ಕಾಗದ ಮಡಿಸಿ ನಂಬರು ಮಾಡಿದೆ ವಲ್ಲ ಅದು?"

"ಹೌದು"

"ಈಬಾರಿ ಬರೆ ಇಕ್ತಿವಿ ನಡಿರಿ"

"ಯಾಕಪ್ಪ...."

"ಮತ್ತೆ ನಮ್ಮ ಅಳ್ಳಿ ಹೆಂಗಿತ್ತೋ ಹಂಗೇ ಇದೇ "

"ಅದಕ್ಕೆ—ಬದಲಾಯಿಸೊಕೆ ಈ ಸಲ ಚುನಾಯಿಸಿ ನನ್ನ ಅನ್ನೊದು...."

"ಕ್ಯಾಸು ಜೇಬಿನಾಗೆಷ್ಟು ಮಡಗಿದ್ದೀಯ"

"ಕ್ಯಾಸು! . ಆಂ....ನಾನು ಹೇಳೋದೂ....ಸೇವೆ, ಬಡವರ ಗೋಳು—ಸತ್ಯ ಅಹಿಂಸೆ...."

"ಅಯ್ಯಯ್ಯ ...ಬರೇಮಾತಾಡಿ ಹಿಂಸೆ ಮಾಡಬ್ಯಾಡ ತೆಗಿರಿ....ಈಗ ನಿಮಗೆ ನಂಬರು ಮಾಡಬೇಕೇನ್ರೀ...."

"ನೀನು ನಿನ್ನ ಸ್ನೇಹಿತರು-ಬಳಗ-"

"ಇನ್ನೊಬ್ರ ವಿಷಯ ಬ್ಯಾಡ.. ಓಟುಕೊಟ್ಟಮೇಲೆ ನೀವ್ಯಾರೊ ನಾವ್ಯಾರೊ.. ಹೋದಸಲದ ಅನುಭವ ಏಕೆ—ತೆಗಿರ್ರಿ ಎಷ್ಟೈತೆ ಜೇಬಿನಾಗ"

"ಆಂ—ಹುಂ....ಮತ್ತೇ....ನಾನು ಹೇಳೋದೂ....ನಿಮ್ಮ ಹಳ್ಳಿ ಉದ್ಧಾರದ ವಿಷಯ"

"ಅದೆಲ್ಲ ಆಯ್ತುಲ್ಲ ಐದು ವರ್ಷದಿಂದ—ಈಗ ದಕ್ಕಿದ್ದೆ ಲಾಭ....ಹೂಂ ತೆಗಿ"

—ಎಂದಾಗ ಆ ವ್ಯಕ್ತಿ ಆಚೆ ಈಚೆ ನೋಡಿ ಜುಬ್ಬದ ಜೇಬಿಗೆ ಕೈ ಇಟ್ಟಾಗ—ನಾನು ಒಳಗೇ ನನ್ನ ಅಸ್ತ್ರಕ್ಕೆ ಮೆಚ್ಚಿದೆ... ಆದರೆ ಅವನು ಹೊರತೆಗೆದದ್ದು ಕರವಸ್ತ್ರ—ಒರೆಸಿಕೊಳ್ಳಲು ಹಣೆಯ ಬೆವರನ್ನು.

"ನನ್ನ ಸ್ನೇಹಿತರು ಆಚೆಮನೆ ಕೆಂಚ—ಗುತ್ತಗ-ರಾಮ-ಮುನಿಯ-ಎಂಕ್ಟಪ್ಪ ಎಲ್ಲಾರ ಓಟು ಸೇರಿ ಐನೂರು ಓಟು ನಮ್ಮೋವು"

—ಎಂದು ಹೊರಡಲನುವಾದೆ.

ಬನ್ನಿ ್ರೀ ಇಲ್ಲಿ ಸ್ವಾಮೀ ..."

"ಸ್ವಾಮಿಗೀಮಿ ಬೇಡ—ಕ್ಯಾಸು—ಅದೇ ಈಗ ಸರಿಯಾದ ದಾರಿ—ಏನಂತಿರಿ ನೀವು ಕೊಟ್ರೆ ಸರಿ. ಇಲ್ಲಾಂದ್ರೆ ಎದುರು ಪಾರ್ಟಿ ಪೆಟ್ಟಿಗೆಗೆ ಆಕಿಬಿಡ್ತೀನಿ...."

—ಎಂದಾಗ ಯಥಾಶಕ್ತಿ ನನ್ನ ಕೈಗೆದಕ್ಕಿತ್ತು. ಜೇಬಿಗೆ ಅದನ್ನ ಸೇರಿಸಿ ನಾನು ದೇಶಾವರಿ ನಗೆ ಬೀರಿದೆ—ಆ ದೇಶಸೇವಕರೂ ನಸುನಕ್ಕರು.

ನಮ್ಮ ಓಟು ಅವರಿಗಲ್ಲದೆ ಯಾರಿಗೆ? ಎಂದು ಅನ್ನಬಹುದು. ಆದರೆ ಓಟಿನ ಬೂತು ಸೇರಿದಮ್ಯಾಲೆ ಅವರವರ ಹಕ್ಕು ಯಾರಿಗಾನ ಹಾಕಿ—ನಿಮಗೇ ಹಾಕಿದೀ ವಿಂತ ಹೇಳಿದರಾಯ್ತು ಅಲ್ಲವೆ?

— ದಾಶರಥಿ ದೀಕ್ಷಿತ್.

---

# ಸಂಪಾದಕರಿಗೆ ಪತ್ರ

## (ಕುಮಾರ ವ್ಯಾಸನ ಟೈಪ್‌ರೈಟರು)

---

ಫೆಬ್ರವರಿ ತಿಂಗಳ ಸಂಚಿಕೆಯಲ್ಲಿ 'ಹಲಗೆ ಬಳಪವ ಹಿಡಿಯದೊಂದಗ್ಗಳಿಕೆ' 'ಪದವಿಟ್ಟಳಿಸದಿರುವ ಇನ್ನೊಂದು ಅಗ್ಗಳಿಕೆ' ಯುಳ್ಳವನಾಗಿದ್ದ ಲಿಪಿಗಾರ ದಿವಂಗತ ಕುಮಾರ ವ್ಯಾಸರು ಟೈಪ್‌ರೈಟರ್ ಯಂತ್ರವನ್ನು ಉಪಯೋಗಿಸಿದ ಪ್ರಸ್ತಾಪ ಬಂದಿತ್ತಷ್ಟೆ! ಆ ಕುರಿತು ನಾವು ಹೆಚ್ಚಿನ ಬೆಳಕು ಬೀರಲು ಸಮರ್ಥರಿದ್ದೇವೆ ಎಂದು ಅರುಹಲು ಅತೀವ ಸಂತಸವಾಗುತ್ತದೆ.

ಶ್ರೀಯುತ ಕುಮಾರ ವ್ಯಾಸಜೀಯವರು ಉಪಯೋಗಿಸಿದ ಟೈಪ್‌ರೈಟರು ಇಂದಿಗೂ ನಮ್ಮ ಮಿತ್ರರೊಬ್ಬರೊಡನೆ ಇದೆ ಎಂಬುದು ಲೋಕಕ್ಕೆ ಸಮಾಧಾನ ಕೊಡುವಂಥ ವಿಷಯ. ಈ ಮಹಾ ಟೈಪ್‌ರೈಟರು ನಮ್ಮ ಮಿತ್ರರ ಅಜ್ಜನಿಂದ ಬಂತು ಹೈದರಾಲಿಯವರದೆಂದು ಕಂಡು ಬರುವ ಗಡಿಯಾರವೆನ್ನಬಹುದಾದಂಥ ಯಂತ್ರವೊಂದು ಅವರ ಅನುಜನ ಪಾಲಿಗೆ ಹೋಯಿತು. ಟೈಪ್‌ರೈಟರು ಇವರದಾಯಿತು. ಅದನು ಅವರು ಎಂದೂ ಹೊರತೆಗೆತಿದ್ದಿಲ್ಲ. ಆದರೆ ಮೊನ್ನೆ ಹರಳೆಣ್ಣೆ ಕಂಪೆನಿಯೊಂದರ ಜಾಹೀರಾತಿಗೆ ಪ್ರಚಾರ ಕವನವೊಂದನ್ನು ಸಿದ್ಧಪಡಿಸುವ ಕಾರ್ಯಭಾರ ನಮ್ಮ ಮಿತ್ರರ ಮೇಲೆ ಬೀಳಲಾಗಿ, ಅವರು ಆ ಆಂಗ್ಲಕವನವನ್ನು ಟೈಪ್ ಮಾಡಲು ತಮ್ಮ ಯಂತ್ರದ ಸೆರೆಬಿಡಿಸಿದರಂತೆ. ಮೊಳೆಗೊಂದರಂತಿದ್ದ ಜಿರಳೆಗಳನ್ನು ತೆಗೆದು ಹಾಕಿ, ಹಾಗೂ ಹೀಗೂ ರಿಬ್ಬನು ಜೋಡಿಸಿ ಕಾಗದ ಸಿಕ್ಕಿಸಿದ್ದಾಯಿತು. ಎಣ್ಣೆಸವರಿ ಬೆಣ್ಣೆಪೂಸಿ ಉಪಚರಿಸಿದ್ದರಿಂದ ಯಂತ್ರ ಟಪಟಪಿಸತೊಡಗಿತು. ಕಾಗದದ ಮೇಲೆ ಏನೋ ಲಿಪಿ ಮೂಡಿತು. ಕೂಡಲೆ ಮಿತ್ರರು ಓಡಿಬಂದು ನಮ್ಮನ್ನು ಕರೆದುಕೊಂಡು ಒಯ್ಯುವಂಥವರಾದರು. ನಾವು ಹೋಗಿ ನೋಡಿದಾಗ ಲಿಪಿ ಇಂಗ್ಲೀಷಂತೂ ಅಲ್ಲ. ಕನ್ನಡವೂ ಅಲ್ಲ ಎಂದು ಕಂಡು ಬಂದಿತು. ಆದರೆ ಬಹಳಹೊತ್ತು ಪರೀಕ್ಷಿಸಿದಾಗ ಯಾವುದೋ ಹಳೆ ಮಾದರಿಯ ಕನ್ನಡದ ಲಿಪಿ ಎಂದು ಭಾಸವಾಯಿತು. ಸಾಲದ್ದಕ್ಕೆ ಕುಮಾರವ್ಯಾಸಜೀಯವರದೇ ಟೈಪ್‌ರೈಟರು ಎಂಬುದಕ್ಕೆ ಬೇರೊಂದು ಆಧಾರವೂ ದೊರಕಿತು. ನಮ್ಮ ಮಿತ್ರರು ಯಂತ್ರವನ್ನು ಸರಿಪಡಿಸಲು ಸಾಕಷ್ಟು ಬೆವರು ಸುರಿಸಿ ಅಂಗಿ ಪಂಚೆ ಒದ್ದೆ ಮಾಡಿಕೊಂಡ ಮೇಲೆಯೇ ಟೈಪ್‌ರೈಟರು ಟಪಟಪಿಸತೊಡಗಿದ್ದು. ಅನಂತರ ಬೆವರೆಲ್ಲ ಆರಿಹೋಗಿ ಮೈ ಬಿಸಿಯಿಂದ ಬಟ್ಟೆ ಒಣಗಿದ್ದೇ ತಡ ಟೈಪ್‌ರೈಟರೇ ನಿಂತು ಹೋಯಿತು. ಕುಮಾರ ವ್ಯಾಸಜಿಯವರು ಕೂಡ ಅವರು ಒದ್ದೆ ಬಟ್ಟೆಯಲ್ಲಿರುವಷ್ಟು ಹೊತ್ತು ಮಾತ್ರ ಭಾರತವನ್ನು ಬರೆಕೊಳ್ಳಲಾಗುತ್ತಿತ್ತೆಂದು ಐತಿಹ್ಯವಿದೆ! ಹೀಗೆ ಪದೇ ಪದೇ ಬಟ್ಟೆಯನ್ನು ಒದ್ದೆ ಮಾಡಿಕೊಂಡಿದ್ದರೂ ಅವರಿಗೆ ನೆಗಡಿಯಾಗದಿದ್ದುದು ಶ್ರೀ ವೀರನಾರಾಯಣನ್‌ರವರ ದಯೆಯಿಂದಿ

ರಬೇಕು! ಆದರೆ ನಮ್ಮ ಮಿತ್ರರಿಗೆ ತೀರ್ಥ ತೆಗೆದುಕೊಂಡರೂ ಸಾಕು, ನೆಗಡಿಯಾಗುತ್ತದೆ. ಆದ್ದರಿಂದ ಬಟ್ಟೆಯನ್ನು ಒದ್ದೆಮಾಡಿಕೊಂಡು ಯಂತ್ರವನ್ನುಪಯೋಗಿಸುವಷ್ಟು ಧೈರ್ಯವಿಲ್ಲ ಅವರಿಗೆ. ಅದೇನೇ ಇರಲಿ ಈ ಯಂತ್ರ ಶ್ರೀಯುತ ಕುಮಾರವ್ಯಾಸಜೀಯವರದೇ ಎಂಬುದರಲ್ಲಿ ಸಂಶಯವಿಲ್ಲ. ಕರ್ಣಾಟಕದ ಈ ಅಮೂಲ್ಯ ಸೊತ್ತು ಕರ್ಣಾಟಕದಲ್ಲೇ ಉಳಿದಿರುವುದು ಹೆಮ್ಮೆ ಪಡತಕ್ಕ ವಿಷಯ. ಅದನ್ನು ಉಳಿಸಿಕೊಂಡ ನಮ್ಮ ಮಿತ್ರರು ಅಭಿನಂದನಾರ್ಹರು. ಕರ್ಣಾಟಕಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ ಉದ್ದೇಶದಿಂದ ಅವರು ಈ ಸಲ ಚುನಾವಣೆಗೆ ನಿಂತಿದ್ದಾರೆ. ಒಂದು ಮಹೋಪಕಾರದಿಂದ ಕನ್ನಡಿಗರನ್ನೆಲ್ಲ ಚಿರ ಋಣಿಗಳನ್ನಾಗಿ ಮಾಡಿಕೊಂಡ ಶ್ರೀಯುತರಿಗೇ ತಮ್ಮ ಓಟುಗಳನ್ನು ಕೊಟ್ಟು ಕರ್ಣಾಟಕದ ಪರಂಪರೆ ಉಜ್ವಲವಾಗಿ ಉಳಿಯುವಂತೆ ಮಾಡಬೇಕೆಂದು ಸಂಬಂಧಪಟ್ಟವರೊಡನೆ ಈ ಮೂಲಕ ಬಿನ್ನವಿಸಿಕೊಳ್ಳುತ್ತೇವೆ.

—ಪಂಡಿತೋತ್ತಮ.

[ಓಟು ಕೊಡುಕ್ಕೇನೋ ತಯಾರಿ ನಾವು; ಆದರೆ ನಮ್ಮ ಪತ್ರಿಕೆಗೆ ನಾಲ್ಕು ವರ್ಷದ ಚಂದಾ ಹಣವನ್ನು ಮೊದಲೇ ರವಾನಿಸಿದರೆ ಮಾತ್ರ!—**ಸಂ.**]




— ಪ್ರಸಾರ ಮುಕ್ತಾಯ —

ರಾಮುಸ್ಕಂಧಂ ಹನೂಮಂತಂ
ವೈನತೇಯಂ ವೃಕೋದರಂ
ಶಯನೇ ಯಸ್ಮರೇನ್ನಿತ್ಯಂ
ದುಃಸ್ವಪ್ನಂ ತಸ್ಯನಶ್ಯತಿ

# ಎಚ್ಚರೆಚ್ಚರು

ಎಚ್ಚರೆಚ್ಚರು ಪೌರ! ಭಾರತದ ಬಂಗಾರ
ನಿನ ಓಟ ಕೊಡುಬಾರ! ಎಚ್ಚರೈ! ಏಳೈ!
ತುತ್ತೂರಿ ಮೇಳಗಳು, ಕಸ್ತೂರಿ ಕೂಗುಗಳು,
ಎಲ್ಲವೂ ಮುಗಿದಾಯ್ತು, ಎದ್ದು ಬಾರ!

ಸದ್ದೆಲ್ಲ ಅಡಗಾಯ್ತು, ಗದ್ದಲವು ನಿಂತಾಯ್ತು,
ಬುದ್ಧಿಯೋಟಕೆ ಈಗ ಶಾಂತಿ ಬಂತು.
ಎದ್ದು ಮುಖ ತೊಳೆಯುತ್ತ ತೊಳೆದ ಕೈಯಿಂ ನೀನು
ಬೂತಿನಾ ಡಬ್ಬದಲಿ ಇಂಗಿತವ ತೂರು!

ನೆಲದರಸ, ಬಾನರಸ! ನೆಮ್ಮದಿಯನರಸೆ
ಸಕಲಸಂಪದದರಸೆ! ಎಚ್ಚರೈ! ಏಳೈ!
ಬಗೆಬಗೆಯ ರಾಗದಲಿ ರಂಗು ರಂಗಿನ ಮಾತ
ಕೂಗಿ ಕಿವಿ ತೂತಾಯ್ತು, ಏಳು ಇನ್ನು

ಜೋಡೆತ್ತು ನಿಂತಿಹುದು, ನೇಗಿಲೂ ಬಂದಿಹುದು,
ಸಿಂಹ ಗರ್ಜನೆ ಕೇಳು ಗುಡಿಸಲಲ್ಲಿ
ಕರ್ನಾಟ ದೇವಿಯಾ ಮುಡಿಯಲ್ಲಿ ಮುಡಿಬಾರ
ಓಟ ಪುಷ್ಪವನಿಂದೆ, ಎಚ್ಚರೈ! ಏಳೈ!

—ಕಾಮತ್.

(ಪು. ತಿ. ನ ಹೆಜ್ಜೆಯನ್ನನುಸರಿಸಿ)

# ಪ್ರಾಣೇಶ ಪ್ರಸಂಗ

## ನಿಮ್ಮ ಓಟು ಯಾರಿಗೆ?

"ನವದುಂಧುಬಿ" ತಗುಲಿಹಾಕಿಕೊಂಡಿದ್ದು ಸಾಲದೋ ಎಂಬಂತೆ ಪ್ರಾಣೇಶ ಇನ್ನೊಂದು ಸುಳಿಯಲ್ಲಿ ಸಿಕ್ಕಿಬಿದ್ದಿದ್ದಾನೆ. ಸುಳಿಯೆಂದರೆ ನಿಜವಾದ ಸುಳಿ; ಚುನಾವಣೆಯ ಸುಳಿ!

ಮುದುಕಿಯೊಬ್ಬಳು ಮನೆ ಮುಂದಿನ ಮಾವಿನಮರ ಬಿದ್ದಿದ್ದು ನೋಡಿ, ಈಗ ಸತ್ತರೆ ಕಟ್ಟಿಗೆಗೆ ತೊಂದರೆಯಿಲ್ಲ ಮಗನಿಗೆ ಎಂದುಕೊಂಡು, ಕೂಡಲೆ ಪ್ರಾಣ ಬಿಟ್ಟಳಂತೆ. ಹಾಗಾಯಿತು ಸಮಾಚಾರ. ಪ್ರಾಣೇಶನಿಗೆ "ನವದುಂಧುಭಿ" ಗಂಟು ಬಿದ್ದಿದ್ದನ್ನು ಕಂಡು ಗೋಪಣ್ಣನಿಗೆ ಚುನಾವಣೆಗೆ ನಿಲ್ಲಬೇಕೆಂಬ ಸ್ಫೂರ್ತಿ ಬಂತು. ಪ್ರಾಣೇಶನೂ ಅವನೂ ಸೇರಿ ಆ ವಿಷಯವನ್ನು ಚರ್ಚಿಸಿ ನಿರ್ಧಾರಕ್ಕೆ ಬಂದ ಮೇಲೆ ನಮ್ಮೊಡನೆಲ್ಲ ಅದರ ಪ್ರಸ್ತಾಪ ಎತ್ತಿದರು. ಮೊತ್ತಮೊದಲು ಎಲ್ಲರೂ ಥೂ ಥೂ ಎಂದೆವು. ಅಷ್ಟರಲ್ಲಿ ನಾಮ ಪತ್ರ ಸಲ್ಲಿಸಿಯಾಗಿತ್ತು. ತಲೆ ಬೋಳಿಸಿಕೊಂಡು ದಿವಸ ಕೇಳಲು ಬರುತ್ತೀಯಾ ಎಂದು ಹೀಯಾಳಿಸಿದೆವು. ಕಂಟ್ರಾಕ್ಟು ಮಾಡಿ ಕೊಂಡು ಕಾಸು ಕೂಡಿಸಿ ತೆಪ್ಪಗಿರಬೇಕಾದರೆ ನಿನಗೆ ಯಾಕೊ ಈ ಅಧಿಕಾರದ ಹುಚ್ಚು ಎಂದು ತಿವಿದೆವು. ಭೂದಾನವೋ ಶ್ರಮದಾನವೋ ಮಾಡಿ ತಣ್ಣಗಿರುವುದನ್ನು ಬಿಟ್ಟು ನಿನ್ನಿಂದಾಗಿ ನಮಗೆಲ್ಲ ಈ ಚುನಾವಣೆಯ ಬಿಸಿತಟ್ಟುವಂತಾಯಿತಲ್ಲ, ಸಲ್ಲದ ಉದ್ವೇಗಕ್ಕೆ ಕಾರಣವಾಯಿತಲ್ಲ, ಎಂದು ದೂರಿದೆವು.

ಆದರೆ ಗೋಪಣ್ಣ ನಮ್ಮಂಥ ನೂರು ಮಂದಿಯ ಬಾಯಿ ಮುಚ್ಚಿಸಬಲ್ಲ. ಹಳೇ ಹುಲಿ ಆತ. ಕಳೆದ ಸಲ ಬೇರೊಬ್ಬರಿಗಾಗಿ ಓಟು ಬೇಡಿದ್ದ ಈಗ ತನಗಾಗಿ ಬೇಡುತ್ತಾನೆ, ಅಷ್ಟೆ!

"ನನಗೇನು ಅಧಿಕಾರದ ವ್ಯಾಮೋಹವಿಲ್ಲಪ್ಪ. ಪ್ರಜಾಪ್ರಭುತ್ವ ಎಂದಮೇಲೆ ನಾವುಗಳೆಲ್ಲ ರಾಜಕೀಯದಲ್ಲಿ ಕೊಂಚ ಸಕ್ರಿಯ ಆಸಕ್ತಿ ತೋರಿಸಬೇಕಾದ್ದು ಕರ್ತವ್ಯ. ಏನಾದರೂ ಹೇಗಾದರೂ ಆಗಿಕೊಂಡು ಹೋಗಲಿ ಎಂದು ತೆಪ್ಪಗಿದ್ದುಬಿಟ್ಟರೆ ಅದಕ್ಕೆ ಶಿಕ್ಷೆ ಇದ್ದೇ ಇದೆ ಥರ್ಡ್ ಕ್ಲಾಸ್ ಜನರು ಮೂರ್ಖರು, ಪುಂಡರು—ಇಂಥವರುಗಳಿಂದೆಲ್ಲ ಆಳಿಸಿಕೊಳ್ಳುವ ಕಾಲ ಬರುತ್ತದೆ ಅಷ್ಟೆ!"

"ಓಹೋ ಹಾಗೇನು! ಹಾಗಾದರೆ ನೀನೇನು ಮಹಾ ಬೃಹಸ್ಪತಿ, ಫಸ್ಟ್ ಕ್ಲಾಸ್ ಆಸಾಮಿ, ಸಂಭಾವಿತ ಅಂತ ಚುನಾವಣೆಗೆ ಇಳಿದಿದ್ದೀಯಾ?" ಎಂದು ಏಕಕಂಠದಿಂದ ಸ್ನೇಹಿತರೆಲ್ಲ ಪ್ರತಿಭಟಿಸಿದೆವು. ಅದಿರಲಿ, ನಿನಗೆ ಉಮೇದುವಾರ ನಾಗಲು ಇರತಕ್ಕ ಅರ್ಹತೆಯಾದರೂ ಏನು ಹೇಳು?" ಎಂದು ವಾದಕ್ಕೆ ನಿಂತೆವು.

"ಅರ್ಹತೆ? ಅರ್ಹತೆ ಉಮೇದ್ವಾರಿಯಾಗಬೇಕೆಂಬ ಮನಸ್ಸಿರುವುದೇ!" ಎನ್ನುತ್ತಾ ಪ್ರಾಣೇಶ ಅವನ ಪಕ್ಷ ವಹಿಸಿದ. ಎಲ್ಲರೂ ಹೋ ಎಂದು ನಕ್ಕೆವು.

"ಲೋ, ಇಂಟರಿನಲ್ಲಿ ಕುಂಟಿ ಕಾಲೇಜು ಬಿಟ್ಟ ನೀನೇನೋ ನಮ್ಮನ್ನಾಳುವ ವನು?" ಎಂದು ಮೂದಲಿಸಿದೆವು.

ಗೋಪಣ್ಣ ಬಿಟ್ಟುಕೊಡಲಿಲ್ಲ. "ಹೋಗ್ರೋ ಹೋಗ್ರೋ! ಯಾರೋ ನಿಮಗೆ ಹೇಳಿದ್ದು, ಮೆಂಬರಾಗಬೇಕಾದರೆ ಬೀಯೆ ಎಮ್ಮೆಯೇ ಆಗಬೇಕಂತ? ರಾಜಕೀಯ ಧುರೀಣ ಮಹಾ ತಜ್ಞನೇನೂ ಆಗಿರಬೇಕಾಗಿಲ್ಲ ರಾಜ್ಯಯಂತ್ರದ ದೈನಂದಿನ ಕಾರ್ಯ ನಡೆಯೋದು ಅಧಿಕಾರಿಗಳಿಂದ. ಅವರು ಆಯಾಯ ವಿಷಯದಲ್ಲಿ ಚೆನ್ನಾಗಿ ತಿಳಿದಿರಬೇಕೆಂಬುದು ನಿಜ. ನಮಗೆ ಹಾಗಲ್ಲ. ('**ನಮಗೆ**'! ಅವನ ಸೊಕ್ಕು ನೋಡಿ!) ರಾಜ್ಯ ನೀತಿಜ್ಞನಿಗೆ ಮುಖ್ಯವಾಗಿ ಬೇಕಾದ್ದು ಇಷ್ಟೆ. ಜನ ಗಳನ್ನು ಹೊಂದಿಸಿಕೊಂಡು ಹೋಗುವ ಸಾಮರ್ಥ್ಯ, ಅವರನ್ನು ಕಾಡುವ ಸಮಸ್ಯೆ ಗಳೇನು ಎಂದು ತಿಳಿದುಕೊಳ್ಳುವ ಶಕ್ತಿ, ಆ ಸಮಸ್ಯೆಗಳಲ್ಲಿ ಯಾವುದು ಮುಖ್ಯ, ಯಾವುದು ಅಮುಖ್ಯ ಎಂದು ತೂಗಿ ನೋಡುವ ಚಾಣಾಕ್ಷತೆ, ಮುಖ್ಯ ಸಮಸ್ಯೆಗಳನ್ನು ಬಗೆಹರಿಸಲು ಬೇಕಾದ ಬುದ್ಧಿವಂತಿಕೆ ಇವಿಷ್ಟಿದ್ದರೆ ತೀರಿತು. ಅದು ಬಿಟ್ಟು, parliamentarian ಅನ್ನಿಸಿಕೊಳ್ಳಬೇಕಾದರೆ ಲಾಯರೇ ಆಗಬೇಕು, ಡಾಕ್ಟರೇ ಆಗಬೇಕು, ಇನ್ನೇನೋ ಆಗಿರಬೇಕು ಎಂಬುದರಲ್ಲಿ ಅರ್ಥವಿಲ್ಲ" ಎಂದು ಮುಂತಾಗಿ ಒಂದು ಉಪನ್ಯಾಸವನ್ನೇ ಕೊಟ್ಟುಬಿಟ್ಟ ಗೋಪಣ್ಣ.

"Certainly!" ಅಂತ ಪ್ರಾಣೇಶನ ಕುಮ್ಮಕ್ಕು ಜೇರೆ ಅವನಿಗೆ! "Parliament is not a collection of distinguished experts" ಅಂತ ಲಾಸ್ಕಿ ಹೇಳಿದಾನಂತೆ!

ಆದರೆ ನಾವು ಬಿಡಲಿಲ್ಲ. ಇಂಟರ್ ನಪಾಸಾದರೂ ರಾಜಕೀಯಜ್ಞನಿಗೆ ಬೇಕಾದ ನೀನು ಹೇಳಿದ ಉಳಿದೆಲ್ಲ ಗುಣಗಳೂ ನಿನ್ನಲ್ಲಿವೆ ಅಂತ ತಿಳಕೊಂಡಿ ದ್ದೀಯಾ?' ಎಂದು ಮತ್ತೂ ಪ್ರಶ್ನಿಸಿದೆವು.

"ಅದೆಲ್ಲಾ ಮತ್ತೆ ಗೊತ್ತಾಗುತ್ತೆ!"

"ಸದ್ಯ ಓಟು ಕೊಡಿ, ಓಟು ಬೇಡಿ" ಅಷ್ಟೇ ಕಾಣೆ ನಿನ್ನ ಹೇಳಿಕೆ.

"ಅಷ್ಟೆ! ಅಷ್ಟೆ!" ಎಂದು ನಾಚಿಕೆಯಿಲ್ಲದೆ ಹಲ್ಲುಕಿರಿದರು ಗೋಪಣ್ಣ ಪ್ರಾಣೇಶ. ಅಂದ ಮೇಲೆ ಚುನಾವಣೆಯಲ್ಲಿ ಮೊದಲ ಹಂತಕ್ಕಿಳಿದಿದ್ದಾರೆ ಎಂದಾಯಿತು. ನಾಚಿಕೆ ಬಿಡುವುದೇ ಅದರ ಲಕ್ಷಣವಲ್ಲವೆ?

ಇದೆಲ್ಲಾ ನಡೆದಿದ್ದು ಪ್ರಜಾರಾಜ್ಯದ ದಿನ. ನವದುಂಧುಭಿಯ ವಿಶೇಷ ಸಂಚಿಕೆಯನ್ನು ಉದ್ಘಾಟಿಸುವ ನೆಪಮಾಡಿಕೊಂಡು ಪ್ರಾಣೇಶ ದೊಡ್ಡ ಪಾರ್ಟಿ ಏರ್ಪಡಿಸಿದ್ದ. "ಮದುವೆಯ ಪಾರ್ಟಿ ತಪ್ಪಿಸಿದ್ದಾನೆ ಒರಟ"—ಎಂಬ ಸ್ನೇಹಿತರ ದೂರನ್ನು ಪರಿಹರಿಸಿದಂತಾಯಿತು ಎಂದು ನಾನಂದುಕೊಂಡಿದ್ದರೆ ಈ ಖದೀಮ ಚುನಾವಣೆ ಕೆಲಸಕ್ಕೆ ಸ್ನೇಹಿತರನ್ನು ಒಲಿಸಲು ಅವರನ್ನೆಲ್ಲ ಹೀಗೆ ತಲೆಹಾಕಿಕೊಂಡ ಎಂಬ ಅಪವಾದ ಹುಟ್ಟಿಸಿದ. ಆದರೂ ಅವನ ಉದ್ದೇಶ ಈಡೇರಿತು! ಈಗ ಒಂದು ನಿಮಿಷ ಬಿಡುವಿಲ್ಲದೆ ಪ್ರಚಾರ ಕಾರ್ಯ ಭರದಿಂದ ಸಾಗಿದೆ. 'ನವದುಂದುಭಿ' ಮೊಳಗುತ್ತಿದೆ. ಒಮ್ಮೆ ಖಂಡಿಸುತ್ತಾ, ಒಮ್ಮೆ ವಿಷಕಾರುತ್ತ, ಒಮ್ಮೆ 'ಯುಟೋಪಿಯ'ವನ್ನು ಚಿತ್ರಿಸುತ್ತಾ ಗೋಪಣ್ಣನನ್ನು ಪ್ರಸಿದ್ಧಿಗೆ ತರಲು ಯತ್ನಿಸುತ್ತಿದೆ, ಎರಡಾಣೆಯ ಪೇಪರು. ಹತ್ತು ಜನರ ದ್ವೇಷ ಕಟ್ಟಿಕೊಂಡಾದರೂ ಪ್ರಸಿದ್ಧಿಗೆ ಬರಬೇಕೆಂದಿರುವವರಿಗೆ ಚುನಾವಣೆ ಒಳ್ಳೆಯ ಸಾಧನ. ಪತ್ರಿಕಾ ಪ್ರಚಾರವಂತೂ ಅಮೂಲ್ಯವಾದ ಸಾಧನ ಆ ಮಟ್ಟಿಗೆ! ಅಂತೂ ಅದಿಲ್ಲದೆ ಪ್ರಜಾಪ್ರಭುತ್ವ ಮುನ್ನಡೆಯಲಾರದೋ ಏನೋ!

ಪ್ರಾಣೇಶ ಚುನಾವಣಾರಂಗಕ್ಕೆ ಹೊಸಬ ಆದರೆ ಅವನ ಹೆಂಡತಿ ಕಳೆದ ಚುನಾವಣೆಯ ಕಾಲದಲ್ಲಿ ಇನ್ನೂ ಹೈಸ್ಕೂಲಿನಲ್ಲಿ ಕಲಿಯುತ್ತಿರುವಾಗಲೇ, ಚುನಾವಣೆಯ ಪ್ರಚಾರಗೀತಗಳನ್ನು ಮೈಕಿನ ಮುಂದೆ ನಿಂತು ಒದರಲು ವ್ಯಾನು ಹತ್ತಿದ್ದಳು. ಈ ಚುನಾವಣೆಯಲ್ಲಿಯೂ ಪ್ರಚಾರಕ್ಕೆ ಹೊರಡುವ ಯೋಗ ಅವಳಿಗಿತ್ತು ಎಂದು ಕಾಣುತ್ತದೆ. ಮಹಿಳಾ ಸಮಾಜದ ಕೆಲವರು ಗೆಳತಿಯರನ್ನು ಕಟ್ಟಿಕೊಂಡು, ಅಲ್ಲಿ ಇಲ್ಲಿ ಮಹಿಳೆಯರ ಸಭೆ ಕರೆಯುವುದರ ಮೂಲಕ, ಅಥವಾ ಮನೆ ಮನೆಗೆ ನುಗ್ಗುವುದರ ಮೂಲಕ ಆಕೆಯೂ ಬಲವಾದ ಪ್ರಚಾರಕ್ಕೆ ತೊಡಗಿಬಿಟ್ಟಿದ್ದಳು. ಆದರೆ ವಿರೋಧಿ ಪಕ್ಷದ ಯಾವಳೋ ತಾಟಕಿ 'ಇದಿನ್ನೂ ಚಿಟ್ಟು ಚೀಪುವ ವಯಸ್ಸಿನದು, ಸ್ಕೂಲುಬಿಟ್ಟು ವರ್ಷವಾಗಿರಲಾರದು, ಮದುವೆಯಾಗಿದೆಯೋ ಇಲ್ಲವೋ— ಇದೂ ಕೂಡ ಓಟು ಕೊಡಿ ಎಂದು ಬರುತ್ತದಲ್ಲ' ಎಂದು ಮುಂತಾಗಿ ಟೀಕಿಸಿದಾಗ, ಒಂದೆರಡು ಸ್ಥಳೀಯ ಪತ್ರಿಕೆಗಳೂ ಹಾಗೆಯೇ ಟೀಕಿಸಿ ಬರೆದಾಗ, ಸರಳಮ್ಮ ತುಂಬ ನೊಂದುಕೊಂಡಳು. ಕೊಂಚ ಕಣ್ಣೀರೂ ಬಂತು, ಕೋಪೋದ್ವೇಗದಿಂದ. "ಸಂತೆಯೊಳಗೊಂದು ಮನೆಯಮಾಡಿ" ಎಂದು ಮುಂತಾಗಿ ಹೇಳಿ ಸಂತೈಸತೊಡಗಿದಾಗ ಮಾತ್ರ ಆಕೆಯ ಸ್ವಾಭಿಮಾನ ಹೆಡೆಯೆತ್ತಿ ನಿಂತು ಇನ್ನು ಮುಂದೆ ಯಾರು ಏನೆಂದರೂ ತಾನು ಲಕ್ಷಿಸುವುದಿಲ್ಲ ಎಂದು ಆಕೆ ಸೆಟೆದು ನಿಲ್ಲುವಂತೆ ಮಾಡಿತು.

ಪ್ರಜಾಪ್ರಭುತ್ವಕ್ಕಾಗಿ ಹೋರಾಟಕ್ಕೆ ತೊಡಗಿದ (ಹುಂ, ಹೋರಾಟವೇ ಮತ್ತೇನು!) ಈ ಕಿರಿಯುರಿಬ್ಬರ ಉತ್ಸಾಹ ನೋಡಿ ನನಗೆ ಅವರಲ್ಲಿ ಅಭಿಮಾನ ಉಕ್ಕುತ್ತದೆ. ಯಾವ ತಂಟೆಗೂ ಹೋಗದೆ ತೆಪ್ಪಗಿರುವವರದು ಅದೇ ಒಂದು ಸೇವೆ ಎಂದುಕೊಂಡಿರುವ ನನಗೆ ಕೊಂಚ ನಾಚಿಕೆಯೂ ಆಗುತ್ತದೆ.

ಎಲ್ಲಕ್ಕಿಂತ ಹೆಚ್ಚಾಗಿ ಹೊತ್ತು ಹೊತ್ತಿಗೆ ಅನ್ನ ನೀರು ತೆಗೆದುಕೊಳ್ಳದೆ ಹೀಗೆ ಒದ್ದಾಡುವಂತೆ ಮಾಡಿದನಲ್ಲ ಗೋಪಣ್ಣ ಎಂದು ಒಮ್ಮೊಮ್ಮೆ ಒಲು ರೇಗುತ್ತದೆ. ಮಹಾರಾಯ ನಮ್ಮ ಗೌರತ್ತೆಗೂ ಚುನಾವಣೆಯ ಬಿಸಿ ತಗುಲಿಸಿಬಿಟ್ಟ. ಹೊತ್ತಿಲ್ಲದೆ ಗೊತ್ತಿಲ್ಲದೆ ಸ್ನೇಹಿತ ಸ್ನೇಹಿತೆಯರೊಡನೆ ಊಟ ಕಾಫಿ ಎಂದು ನುಗ್ಗುತ್ತಾರೆ ಪ್ರಾಣೇಶ ದಂಪತಿಗಳು. ಗೌರತ್ತೆಗೆ ಕೈಕಾಲು ಬಿದ್ದುಹೋಗುತ್ತದೆ. ಹತ್ತು ಮಕ್ಕಳನ್ನು ಹೆತ್ತು ಹತ್ತನ್ನೂ ಕಳಕೊಂಡ ಆಕೆಗೆ ಇದು ಅದಕ್ಕಿಂತ ಹೆಚ್ಚಿನ ಕಷ್ಟ ವೆನಿಸಲಾರದು. ಆದರೆ ವಯಸ್ಸೆಂಬುದಿದೆಯಲ್ಲ! ಅವರಿಗೆ ಸಹಾಯಕ್ಕೆ ಜನ ಒದಗಿಸುವ ವ್ಯವಸ್ಥೆಯಾಗಿದೆ.

ಗೋಪಣ್ಣನ ಮುತುವರ್ಜಿಯಿಂದಾಗಿ 'ನವದುಂದುಭಿ'ಯು ಪ್ರಾಣೇಶನಿಗೆ ಅನ್ನ ಕೊಟ್ಟೀತು ಎಂಬಂತೆ ಕಾಣಿಸುತ್ತಿದೆ. ಜಾಹಿರಾತುಗಳು ಹೆಚ್ಚುತ್ತಿವೆ. ಅವು ಗಳ ನಡುವೆ ಮುಖ್ಯವಾಗಿ ಏನು ತುಂಬಬೇಕೆಂಬುದೇ ಸಮಸ್ಯೆ. ಚುನಾವಣೆ ಮುಗಿಯುವ ತನಕ ಎಲ್ಲವೂ ಅದರ ವಿಚಾರವೇ ಇರಲಿ—ಎಂದರೆ ಸ್ವಪ್ರಚಾರವೇ ಇರಲಿ—ಎಂದು ಗೋಪಣ್ಣನ ಅಭಿಪ್ರಾಯ. ಹಾಗೆ ಮಾಡಿದರೆ ಓದುಗರ ತಲೆ ಕೆಟ್ಟು ಓಟು ಕೊಡಲು ಬೂತಿಗೇ ಬರಲಾರರಲ್ಲೋ ಎಂದು ಉಪಸಂಪಾದಕ ಗೋಗರೆಯುತ್ತಾನೆ.

ಅಗೋ ವ್ಯಾನ್ ಬಂತು ಪ್ರಾಣೇಶನ ಹಿಂದು ಇಳಿಯಿತು. ಇದೇನು ಇಷ್ಟು ಹಿಗ್ಗು? ಎದುರಾಳಿ ಡಾಕ್ಟರ್ ಕಿಟ್ಟೊರಯ್ಯನ ಭಾವಮೈದ ಇವರ ಪಾರ್ಟಿಗೆ ಬೆಂಬಲ ಕೊಡಲೊಪ್ಪಿದಾನಂತೆ. ಸಾವಿರ ಓಟು ಜೇಬಿಗೆ ಬಿದ್ದಂತೆ ಎಂಬ ಹಿಗ್ಗು.

"ಸಾರ್ವತ್ರಿಕ ಚುನಾವಣೆ ಎಂದರೆ ನಾಲ್ಕು ತಿಂಗಳ ವ್ಯಭಿಚಾರ" ಎಂದು ಯಾವುದೋ ದೇಶದ ಚುನಾವಣೆಯ ಕುರಿತು ಲಾಸ್ಕಿ ಹೇಳಿದಾನೆ. ನಿಷ್ಠುರವಾದ ಮಾತು. ಆದರೆ ಎಂತಹ ಸತ್ಯ!

ಅಗೋ ಹೊರಗಡೆ ಕಿರಲುತ್ತಾ ಇದೆ ಪಿಳ್ಳುಗಳ ತಂಡ "**ಓಟು ಯಾರಿಗೆ?**" ನಮಃ! **ಹೆರಾಲ್ಡ್ ಲಾಸ್ಕಿಗೆ!**

—ರಾಮಿ.

—o—

# ಪ್ರತಿಭಾವಂತ

---

ಆತ ಪ್ರಭುದೇವ....ಕವಿಗೋಷ್ಠಿಯ ಅಧ್ಯಕ್ಷನಾಗಿದ್ದ ಪ್ರಭುದೇವ, ಅಂತ ತಿಳಿಯುತ್ತಲೂ, ನಾನು ಕೈಮುಗಿದೆ. "ಗಿಳಿಹಿಂಡಿಗೂ ಗಣಿ ಕೆಲಸಡವರಿಗೂ, ಏನ್ರಿ ಸಾಮ್ಯ?", ಎಂದು ನಾನು ಪ್ರಭುದೇವನನ್ನು ನಡುರಸ್ತೆಯಲ್ಲಿ ನಿಲ್ಲಿಸಿ ಕೇಳೇಬಿಟ್ಟೆ: ಅವನು ಕವಿಯಾದರೆ, ನಾನೇಕೆ ಹೆದರಬೇಕು? ಟೀಕೆ ಮಾಡುವ ಅಧಿಕಾರ, ಸ್ವತಂತ್ರ ಭಾರತದ ಪ್ರತಿಯೊಬ್ಬ ಪೌರನಿಗೂ ಆಜನ್ಮ ಹಕ್ಕು. ಅಲ್ಲದೆ, ನನ್ನಂತವನನ್ನ ಈ ಬರಹಗಾರರು, ವೆಂಕಟಾಚಾರ‍್ರರ ಕಾಲದಿಂದಲೂ, "ವಾಚಕ ಮಹಾಶಯಾ!" ಎಂದು ಸಂಬೋಧಿಸುತ್ತಲೇ ಇದಾರಲ್ಲಾ....ಮತ್ತೆ, ಭಯವೇಕೆ?

"ಗಿಳಿ ಹಿಂಡಿಗೂ ಗಣಿ ಕೆಲಸದವರಿಗೂ ಸಾಮ್ಯ ಇದೆ, ಅಂತ ಯಾವ ಶುಂಠ ಹೇಳುತ್ತಾನೆ?" ಎಂದ, ಪ್ರಭುದೇವ.

"ನೀವೇ", ಎಂದೆ, ನಾನು, ನಗುತ್ತ. "ಓ! ನಾನೇ ಹಾಗೆ ಬರೆದಿದೇನೆಯೆ? ಇರಬಹುದು....ಹೂಂ! ಈಗ, ಜ್ಞಾಪಕ ಬಂತು. ಹೌದು. ಬರೆದಿದೇನೆ....'ಆಳದಲ್ಲಿ ತಾಳ' ಎಂಬ ನನ್ನ ಮಹಾಕಾವ್ಯದಲ್ಲಿ........ಅದರಲ್ಲಿ ತಪ್ಪೇನು? ಅತ್ಯುತ್ತಮ ಮಹೋಪಮೆ, ಕಣ್ರಿ, ಅದು....ನಿಮ್ಮಂತಹವರು ಗಿಳಿ ಹಿಂಡನ್ನೂ ನೋಡಿಲ್ಲ, ಗಣಿ ಕೆಲಸದವರು ಗುಂಪು ಗುಂಪಾಗಿ ಮನೆಯಕಡೆ ಓಡುವುದನ್ನೂ ನೋಡಿಲ್ಲ........ ಕಾವ್ಯಾನೂ ಬರೆದಿಲ್ಲ....ನೀವು ಯಾರು ನಮ್ಮನ್ನ ಟೀಕಿಸುವುದಕ್ಕೆ........ಕಾವ್ಯ ಪ್ರಪಂಚವೇ ಬೇರೆ, ನಿಮ್ಮ ಪ್ರಪಂಚವೇ ಬೇರೆ........ನಿಮ್ಮದು ಕನಸು, ನಮ್ಮದು ಕಣಸು. ನ ಅಲ್ಲ ಣ", ಪ್ರಾರಂಭಿಸಿದ, ಕುಪ್ಪಳಿಸುವುದಕ್ಕೆ, ತುಳಿದ ಕಪ್ಪೆಯಂತೆ.... ಪ್ರಭುದೇವ.

"ಅಲ್ಲ! ಆನೆಗಳ ಸಾಲನ್ನ ಆಕೆಯ ಜಡೆಗೆ ಹೋಲಿಸಿದ್ದೀರಿ! ಅವಳ ಹಣೆ ಆಮೆಯ ಹಾಗಿತ್ತು, ಅಂತಿದೀರಿ....ಆಕಾಶಾನ ಈರುಳ್ಳಿಗಡ್ಡೆ ಅನ್ನಬಹುದಾದರೆ, ಈರುಳ್ಳಿಗೆಡ್ಡೇನ ಆಕಾಶ ಅಂತ ಏಕೆ ಹೇಳಬಾರದು....ಆಕಳಹಾಲನ್ನ ಮೆಟ್ಟೊರು ಮಲ್ಲು ಅಂತ ಹೇಗೆ ಹೇಳುವುದು?"

"ಕವಿಗಳಿಗೆ ಆ ಸ್ವಾತಂತ್ರ್ಯ ಇದ್ದೇ ಇದೆ....ಯಾವುದರಲ್ಲಿ ಬೇಕಾದರೂ, ಅವರು ಯಾವುದನ್ನು ಬೇಕಾದರೂ, ಕಾಣಬಲ್ಲರು .......ಅದಕ್ಕೆ ಕಣಯ್ಯಾ, ಪ್ರತಿಭೆ

ಎನ್ನುವುದು ... ..ಕಾಫಿಬಟ್ಟಲಲ್ಲಿ ನಿಮ್ಮಂತಹವರು ನೊಣವನ್ನು ಕಂಡರೆ, ಕವಿ ಹಲ್ಲಿಯನ್ನೇ, ಹಾವನ್ನೇ ಕಾಣಬಲ್ಲ. ನನಗೆ ದಿನವೂ ಕಾಣಿಸುತ್ತಾ ಇದೆ. ಅಣುವಿನಣುವಿನಣುವಿನೊಳ ನೊಳಗೆ ಕವಿ ದೂರ್ವಾಸನೆಮುನಿಗಳ ಆಶ್ರಯವನ್ನು ಕಾಣಬಲ್ಲ; ತುರುಬು ಬಿಚ್ಚಿಕೊಂಡು ಚೀತ್ಕಾರ ಮಾಡುವ ದ್ರೌಪದೀದೇವಿಯನ್ನು ಅವನು, ಮಣ್ಣುತಿಂಬ ಗೆದ್ದಲುಹುಳದ ಹಲ್ಲ ಸಾಲಿನ ನಡುವೆ ಕಂಡು ಚಕಿತನಾಗಬಲ್ಲ, ನಿಮ್ಮಂತಹ ವಾಚಕ ಮಹಾಶಯರಿಗೆ ತೋರಿಸಬಲ್ಲ....ಅದು ಜಾಣತನ....ನಮ್ಮ ನ್ಯೂಟ್ರಾನ್ ಮೈಕ್ರಾಸ್ಕೋಪಿನ ಸ್ಕೋಪು, ಅದು !”

“ಹೌದ್ದು! ನಿಮ್ಮ ಮಹಾಕಾವ್ಯದಲ್ಲಿ ನೀವು ಇದಕ್ಕಿಂತ ಹೊಲಸು ಉಪಮೆಗಳನ್ನೆಲ್ಲ ತುಂಬಿದೀರಿ ...ನಿಮ್ಮ ಮಾವನವರಿಗೆ ಕಾಗದ ಬರೆಯೋಣ ಅಂತಿದ್ದೆ ...... ಅದಕ್ಕೆ ಮೊದಲು, ನಿಮ್ಮನ್ನೆ ಕೇಳೋಣ, ನಿಮಗೇನಾಗಿದೆ ಅಂತ ವಿಚಾರಿಸೋಣ ಅಂತ ಸುಮ್ಮನಾದೆ....ಅದಕ್ಕೋಸ್ಕರವೇ ನಿಲ್ಲಿಸಿ ಮಾತನಾಡಿದೆ” “ನಮ್ಮ ಮಾವ ಮಾತಂಗಪರ್ವತ! ನೋಡಪ್ಪ! ನಾವು ನಾಲ್ಕಾಣೆ ನಾಣ್ಯದಂತೆ ನಿರಂಕುಶಮತಿಗಳು! ನಮಗೆ ಅರಸರ ಅಂಕೆ ಇಲ್ಲ....ನಿಮ್ಮಂತ ಅರಸಿಕರ ಅಂಕುಶವಿಲ್ಲ ..ಹೆಣ್ಣಿನ ಮುಖವನ್ನು ಕಾಳಿದಾಸ ಕಮಲಕ್ಕೆ ಹೋಲಿಸಬಹುದಾದರೆ, ನಾವು ಗಾಳಿದಾಸರು ಲೇಲಂಡ್ ಬಸ್ಸಿಗೆ ಏಕೆ ಹೋಲಿಸಬಾರದು? ಅಮರಕೋಶ ನೋಡಿಕೊಂಡು ಅವಳ ನಡಿಗೆಯನ್ನು ಆನೇಗೇ ಹೋಲಿಸಬೇಕೇನು? ಲಗಾಮಿಲ್ಲದ ಲಾಂಬ್ರೆಟ್ಟಾಗೆ ಏಕೆ ಹೋಲಿಸಬಾರದು? ನಾನು ಮಾಡಿದೇನೆ, ಬ್ಲಾಟಿಂಗ್ ಪೇಪರಿನ ಅಂಚನ್ನು ಶಾಯಿಯಲ್ಲದ್ದಿದರೆ, ಶಾಯಿ, ಮೇಲೇರುತ್ತದಲ್ಲಾ, ನಿಧಾನವಾಗಿ, ಹಾಗೆ ಸರೋಜ ಕಾಲೇಜಿಂದ ಗೇಟ್‌ತನಕ ಮೆಲ್ಲಗೆ ಬಂದಳು, ಅಂತ ಒಂದು ಮಹೋಪಮೆಯನ್ನು ಏಕೆ ನೆಯ್ಯಬಾರದು? ನಾನು ಮಾಡಿದೇನೆ, ಬಸ್ಸಿಗೆ ಕಾಯ್ದುಹಾಗೆ ನನ್ನ ಪ್ರೇಯಸಿಗಾಗಿ ಕಾಯ್ದೆ, ಎಂದು ಹೇಳಬಹುದಂತೆ! ಪ್ರೇಯಸಿಯನ್ನು ಮಾತ್ರ ಹೊಸಾಹೊಸ ಟಾಟಾ–ಮೆರ್ಸಿಡಿಸ್–ಬೆನ್ಸ್ ಬಸ್ಸಿಗೆ ಹೋಲಿಸಬಾರದಂತೆ, ಅದಕ್ಕೂ ಹಸುರು ಸೀರೆ, ಅವಳಿಗೂ ಹಸಿರು ಬಣ್ಣ....ಹೇಗಿದೆ ನನ್ನ ವಾದಸರಣಿ? ನಾನು ನವ್ಯಕವಿ ಕಣಯ್ಯ! ಹಿಂದೆ, ಕವಿಗಳು ಪಂಡಿತೋತ್ತಮರಿಗೆ ಮಾತ್ರ ಅರ್ಥವಾಗುವ ಹಾಗೆ ಕಾವ್ಯ ಬರೆದರು. ಈಗ ನಾವು, ಕೇಳ್ರೋ ಇಲ್ಲಿ, ಇದು ಪ್ರಜಾಪ್ರಭುತ್ವ ಯುಗ, ಸಾಮಾನ್ಯ ಮನುಷ್ಯನ ಸುವರ್ಣಯುಗ! ಜ್ಞಾಪಕ ಇಟ್ಕೊಕೊ ಈಗ ನಾವು ಬರೆಯೋ ಕಾವ್ಯಗಳನ್ನ ನಿಮ್ಮ ....ವಿಶ್ವವಿದ್ಯಾಲಯದ ವೈಸ್‌ಚಾನ್‌ಸಲರು ಅರ್ಥಮಾಡಿಕೊಳ್ಳಲಾರರು, ಕಣ್ರೊ!.... ನಮ್ಮ ಕಾವ್ಯಧಾರೆ ಹೇಗೆ ಹರಿಯುತ್ತದೆ, ಗೊತ್ತೆ? ಲೀಲಾಜಾಲ....ಲೀಲಾ ಎಂಬುವಳ ಜಾಲದ ಮೂಲಕವೇ....ಕೆಂಡ ಪಿಂಡ ತಿನ್ನುತ್ತೇವೆ ನಾವು, ಗೊತ್ತೆ? ದಂಡ ಪಿಂಡ, ಅಲ್ಲ ಹೇಳುತ್ತೇನೆ ಕೇಳಿ....ನೀವು ಏನಂದಿರಿ? ಗಿಳಿ ವಿಂಡು, ಗಣಿ ಕೆಲಸ, ಹೇಗೆ ಬಂತು, ಒಟ್ಟಿಗೆ ಗೊತ್ತೆ? ಗಿಳಿ ಅನ್ನುತ್ತಲೂ, ನಮ್ಮಂತಹವರ ವಿಚಾರವಾಹಿನಿ ಗುಳಿಯಕಡೆ ಹೋಗುತ್ತೆ. ಆಳವಾದ ಗುಳಿ, ಯಾವುದು? ಗಣಿ! ಗಣಿಯಲ್ಲೇನು

ಸಿಕ್ಕುತ್ತೆ? ಮಣ್ಣು ಮಣ್ಣು ಎನ್ನುತ್ತಲೂ, ಯಾವ ಮಾತು ನಮಗೆ ನೆನಪಿಗೆ ಬರುತ್ತೆ? ಹೆಣ್ಣು ...ಹೆಣ್ಣು, ಅಂದಾಗ? ಹೊನ್ನು! ಹೊನ್ನಿಗಾಗಿ ದುಡಿಯುವವರು ಯಾರು? ಗಣಿ ಕೆಲಸಗಾರರು....ಅವರನ್ನ ಬಂಡವಾಳಗಾರರು ಏನು ಮಾಡುತ್ತಾರೆ? ಹಿಂಡುತ್ತಾರೆ. ಸರಿ "ಗಿಳಿ ಹಿಂಡು....ಗಣಿ ಹಿಂಡು" ನೋಡಿದಿರಾ? ಕಾವ್ಯಸೃಷ್ಟಿ!! ಅಣುವಿನೊಳಗೆ ಮೀಸಾಣ್ ಇದೆ... ಮೀಸಾಣ್, .... ಮೀಸೆ.... ದಾಡಿ....ರುಷಿ, ದೂರ್ವಾಸನ ಹೀಗೆ ಓಡುತ್ತೆ ಪ್ರತಿಭೆ ನಮ್ಮದು? ದೋಸೆ....ತೂತು, ಹರಕು, ಚಿಂದಿ, ಖಡ್ಗೀನ ಛಿಂದಿ ಛಿಂದಿ....ಅದಕ್ಕೇ ನೋಡಿ, ನಾನು ನನ್ನ "ಟಮಟೆ" ಕಾವ್ಯದಲ್ಲಿ, "ದೋಸೆ ಖಡ್ಗವೆ ಡಾಮಸ್ಕಸ್‌ನ ಬ್ಲೇಡು" ಎಂದು ಬರೆದಿರುವುದು, "ಸಿಂಹ ಡಾಲ್ಡಾ" ಅಂತ ಮತ್ತೊಂದು ಮಾತು ಬರುತ್ತದೆ....ಉತ್ತಮ ನವ್ಯಶಬ್ದ. ಒಬ್ಬರಿಗೂ ತಿಳಿಯು ವುದಿಲ್ಲ. ಅಂಥ ಮಾತು ಅದು ಹೇಗಂತೀರೋ? ಸಿಂಹ! ಸರ್ಕಸ್! ಬೋನು! ಚಾವಟಿ! ಬೆತ್ತ! ಕಾಡು! ವನ! ವನಸ್ಪತಿ! ಡಾಲ್ಡಾ! ಹೇಗಿದೆ?"

ಅಷ್ಟುಹೊತ್ತಿಗೆ, ಪ್ರಭುದೇವನ ಸೋದರಮಾವ ಮಾರ್ಕೆಟ್ಟಿನೊಳಗಿಂದ ಬಂದರು...."ಏನೋ, ರೇವಣ್ಣ? ಹುಡುಗನ ಗತಿ ನೋಡಿದೆಯಾ? ನಿನ್ನ ಹತ್ರ ಏನು ಹೇಳುತ್ತಿದ್ದ? ಮಹಾಕಾವ್ಯ, ಮಹೋಪಮೆ, ಮಹಾಶಬ್ದ....ಸಿಂಹ ಡಾಲ್ಡಾ....ಆ? ಎಲ್ಲಾನ್ನೂ ಒಂದೊಂದಾಗಿ ಒದರುತ್ತಾ ಇದ್ದನೋ?"

"ಹೂಂ" ಅಂತ ತಲೆಯಾಡಿಸಿದೆ...."ನಾನೇ ಮೊದಲು ಅವರನ್ನ ಕೆಣಕಿದ್ದು" ಅಂದೆ... "ಮಾಡಬಾರದಾಗಿತ್ತು!" ಎರಡು ತಿಂಗಳಾಯಿತು ನೋಡು. ಆ ಕಾವ್ಯ ಗೋಷ್ಠಿಗೆ ಇನ್ನಾರೂ ಸಿಗಲಿಲ್ಲವೆ? ಹಾಳಾದವರು ಇವನನ್ನ ಅಧ್ಯಕ್ಷ ಅಂದರು. ಒಬ್ಬನೇ ಮಗ, ಅವನಪ್ಪನಿಗೆ! ಅವತ್ತು ರಾತ್ರಿ ಶುರುವಾಯಿತು. ಅನ್ನ ಬಡಿಸಿದರೆ, ಅನ್ನ .. ಬ್ರಹ್ಮ....ದೇಗುಲ....ಅರ್ಚಕ, ಕರ್ಪೂರ ಜಾಗಟೆ... ಜಾವ್ ಅಂತಾನೆ, ಎದ್ದುಬಿಡುತ್ತಾನೆ....ಎಷ್ಟು ಇಂಜಕ್ಷನ್ ಕೊಟ್ಟರೂ ಹೀಗೆಯೇ ಇದಾನೆ" ಅಂದರು.

ಅಷ್ಟುಹೊತ್ತಿಗೆ ಪ್ರಭುದೇವಕವಿಯ "ಪ್ರೇಯಸಿ"....ಲೇಲಂಡ್ ಬಸ್ಸು ಬಂತು. ಸೋದರ ಅಳಿಯನನ್ನೂ ಕೂರಿಸಿಕೊಂಡು, ಮಾವ ಹೊರಟರು. ಆ್ಯಂಟಿ ಪ್ರತಿಭಾ ಇಂಜಕ್ಷನ್ ಇನ್ನೂ ಹತ್ತಾರು ಬೀಳಬೇಕು, ಮಹಾರಾಯನಿಗೆ. ಆಗ, ಸರಿಹೋದೀತು "ಪಾಪ! ಒಬ್ಬನೇ ಮಗ!" ಎಂದು ನಿಟ್ಟುಸಿರುಬಿಟ್ಟೆ.

—ರೇವಣ್ಣ.

---

# ರಥಸಪ್ತಮಿ

(ಈ ಲೇಖನವನ್ನು ದಯವಿಟ್ಟು ಮಾರ್ಚ್ ಎಂಟರ ನಂತರ ಓದುವಿರಾ?)

---

ರಥಸಪ್ತಮೀ ದಿನ ಆಕೆ ಎಳ್ಳು ಬೀರಿದಳು. ಅದರಲ್ಲೇನು ಆಶ್ಚರ್ಯ? ಸಂಕ್ರಾಂತೀಲಿ ಬೀರದವರು ರಥಸಪ್ತಮೀಲೇ ಅಲ್ವೇ ಬೀರೋದು ಅಂತೀರಾ?.... ಹಾಗಲ್ಲ, ಆಕೆ ಹುಟ್ಟಿದ ನಲವತ್ತೈದು ವರ್ಷಕ್ಕೇ ಅವತ್ತೇ ಬೀರಿದ್ದು! ನನಗೆ ಗೊತ್ತು, ಯಾಕೆಂದರೆ ಆಕೆ ನಮ್ಮ ಸಮಾಜದ ಹಳೇ ಸದಸ್ಯೆ. ಅಲ್ಲದೆ ನಮ್ಮ ಮಾವನವರ ಅಕ್ಕನ ಮಗಳು!

ಆಕೆ ಎಳ್ಳು ಬೀರಿದಳು. ಮನೇಲಿ ಯಾವ ಮಗುವೂ ಇಲ್ಲ, ಮೊಮ್ಮಗು ಇನ್ನೂ ಹುಟ್ಟಿಲ್ಲ, ಆದರೂ ಆಕೆಯ ಹಸಿರು ಕಾರು ಬಂದು ಬಾಗಿಲಲ್ಲಿ ನಿಂತಾಗ, ಹುಡುಗರು ಹಾರುತ್ತ ಬಂದು ಹೇಳಿದಾಗ, ನಾನೂ ಬೆಕ್ಕಸಬೆರಗಾದೆ.

ಪುಟ್ಟಾನೆಯಂತಿದ್ದ ಆಕೆ, ತಟ್ಟೆ ಹಿಡಿದು ರಥದಂತೇ ಒಳಕ್ಕೆ ಬಂದಳು. ಹಾಸಿದ ಹರಕು ಚಾಪೆಯ ಮೇಲೆ ಕೂತಳು. ಹಸಿರು ಪ್ಲಾಸ್ಟಿಕ್ ತಟ್ಟೆಯನ್ನು ನನ್ನ ಮುಂದಿಟ್ಟಳು. ಕಬ್ಬು ಬಾಳೆ ಹಣ್ಣುಗಳೊಂದಿಗೆ, ಹಸಿರು ಕಾಗದದ ರಥವನ್ನು ಕತ್ತರಿಸಿ ಅದರೊಳಗೆ ಎಳ್ಳು ತುಂಬಿದ್ದರು. ಸಕ್ಕರೆಯ ರಥಕ್ಕೆ ಹಸಿರು ಬಣ್ಣ ಹಾಕಿತ್ತು. ಕೊಬ್ಬರಿಯನ್ನು ಗುಂಡಗೆ ಕೊರೆದು ರಥದ ಗಾಲಿಯಂತೆ ಸುನೇರಿಯಿಂದ ಸಿಂಗರಿಸಿದ್ದರು!

"ಅಪರೂಪ ಮೀನಮ್ಮನೋರೇ! ನಾನು ಸಂಸಾರ ಹೂಡಿದ ಇಷ್ಟು ದಿನಕ್ಕೆ ಇವತ್ತೇ ನೀವು ಬಂದಿರೋದು!"

"ಹೌದು ನರಸೂ, ಎಲ್ಲೋ ಬರೊಕ್ಕೇ ಆಗಲಿಲ್ಲ. ಏನೋ ಈ ಸಾರಿ ನನಗೆ ಗ್ರಹಗಳು ಕ್ರೂರವಾಗಿದೆಯಂತೆ! ಸೂರ್ಯ ನಮಸ್ಕಾರ ಮಾಡ್ಸಿ, ಸೂರ್ಯ ರಥ ಏರೋ ದಿನ ರಥಸಪ್ತಮಿ ಇವತ್ತು ಅಂತ ಹತ್ತು ಜನ ಮುತ್ತೈದೇರಿಗೆ ಎಳ್ಳು ದಾನ ಮಾಡೋಣ ಅಂತ ಹೊರಟೆ!"

"ಒಳ್ಳೇ ಕೆಲ್ಸ ಮಾಡಿದಿರಿ. ನಿಮಗೇನು ದೇವರು ಕಡಿಮೆ ಮಾಡಿದಾನೆ ಹೇಳಿ! ಹತ್ತು ಜನಕ್ಕಲ್ಲದಿದ್ರೆ ನೂರು ಜನಕ್ಕೆ ನೀಡಬಲ್ರಿ!.... ಪಾಪ, ಹಾಗಾದ್ರೆ, ಗ್ರಹಚಾರ ಚೆನ್ನಾಗಿಲ್ಲವೇ ನಿಮಗೆ?"

"ಇಲ್ಲಮ್ಮ, ಇಷ್ಟಕ್ಕೂ ಯಾವಾಗತಾನೇ ನನ್ನ ಗ್ರಹಚಾರ ಚೆನ್ನಾಗಿತ್ತು ಹೇಳು!"

"ಹಾಗಂದ್ರೇನು ಮಾನಮ್ಮನೋರೇ! ಗೌರಮ್ನ ಹಾಗೆ ಘನವಾದ ಸಂಸಾರ ಆಳ್ತಿದೀರಿ!"

"ಉಂ! ಆಳ್ತಿದೀನಿ!....ನಿನ್ನ ಕೈಲಿ ಹೇಳ್ಕೋತೀನಿ ನರಸೂ,... ಯಾಕೋ ಎಲ್ಲ ನಿನ್ನತ್ರ ಹೇಳಬೇಕು ಅನ್ನಿಸುತ್ತೆ! . ನೋಡು ನರಸೂ, ನಂಬ್ತೀಯೋ ಬಿಡ್ತೀಯೋ, ನಾನಾಗೋ ಹೊತ್ತಿಗೆ ಇಂಥಾ ಗಂಡನ್ನ ಕಟ್ಕೊಂಡು, ಸಂಸಾರ ರಥಾನ ಎಳೀತಾ ಇದೀನಿ!....ಇನ್ಯಾರಾದ್ರೂ ಆಗಿದ್ರೆ....!

"ಅಂದ್ರೆ ! ನಿಮ್ಮೆಜಮಾನ್ರು !....?"

"ಸ್ವಲ್ಪವೂ ಒಳ್ಳೇರಲ್ಲ ನರಸೂ. 'ಎತ್ತು ಏರಿಗೆ, ಎಮ್ಮೆ ನೀರಿಗೆ' ನಮ್ಮ ಬಾಳು! ಎಲ್ಲಾತಕ್ಕೂ ನಾನು ಏತಿ ಅಂದ್ರೆ ಅವರು ಪ್ರತಿ!"

"ಹಾ! !"

"....ಮಾತಿಗೆ ಹೇಳ್ತೀನಿ ನೋಡು ನಿನಗೆ ಗೊತ್ತಿದ್ಯಲ್ಲ. ನಾನು ಈ ಸಮಾಜ, ಸಮ್ಮೇಳನ, ಅದು ಇದು ಕಟ್ಕೊಂಡು ವದ್ದಾಡೋದು ಹೊತ್ತು ಕಳಿಯುಕ್ಕೆ —ಅವರೆಲ್ಲ ಬಲವಂತಮಾಡಿ ನನ್ನ ಈ ಹಸುವಿನ್ನುಡೀಗೆ ಪ್ರತಿನಿಧಿಯಾಗಿ ನಿಲ್ಸಿದ್ರು. ಹೋಗಲಿ, ಅವರ ಮಾತ್ಯಾಕೆ ತೆಗೀಬೇಕು, ಅವರ ವಿಶ್ವಾಸ ಅಂತ ನಾನೂ ಒಪ್ಕೊಂಡೆ. ಹಣ ಕಟ್ಟಿ ಹಿಂದಕ್ಕೆ ಬಂದ ಕೂಡ್ಲೆ ಇವರು ಹೋಗಿ ತಮ್ಹೆಸರು ಕೊಟ್ಟು ಬರೋದೇ—ನನಗೆ ಎದುರಾಳಿಯಾಗಿ!"

"ಛೇ! ಏನನ್ಯಾಯ ಮಾನಮ್ಮನೋರೇ! ಹೀಗೂ ಉಂಟೇ!"

"ಉಂಟಮ್ಮ ಉಂಟು!....ಏನ್ಮಾಡೋದು, ನಾನು ಕೇಳಿಕೊಂಡು ಬಂದದ್ದು! ....ಇನ್ನು ಬರಲೇ ನಾನು! ಮಾತಾಡ್ತಾ ಕೂತುಬಿಟ್ಟೆ....ಹೊತ್ತಾಗಿಹೋಯ್ತು!"

"ಬಂದೆ .... ಕಮ್ಲೂ .... ಕುಂಕುಮ ಎಲೆಡಿಕೆ ತಂದ್ಕೊಡಮ್ಮಾ .... ಹೊರಟೇ ಬಿಟ್ರಾ ?"

"ಹೂಮ್ಮ.......ಅಂದ್ಹಾಗೆ....ನರಸೂ! ನೀವಾದ್ರೂ ನಾಲಕ್ಕು ಜನ ನನಗೆ ಬೇಕಾದೋರು ಬೆಂಬಲ ನೀಡ್ತೀರಿ ಅಂತ ನಂಬಿದೀನಿ!... ನನ್ನ ಗುರುತು....ಹಸಿರು ರಥ! ಮರೀಬೇಡ....ಬರ್ತೀನಿ!...."

ಪಾಪ, ವಿಶಾನಮ್ಮನೋರು ಹೀಗೇ ಕುಂಬಳೂರಿನಲ್ಲಿ ತಮಗೆ ಪರಿಚಯವಿದ್ದ ಮನೆಗಳಿಗೆಲ್ಲಾ ಹೋಗಿ, ಮನಬಿಚ್ಚಿ ಮಾತಾಡಿ ಕಣ್ಣೀರಿಟ್ಟರಂತೆ! ಮಹಿಳೆಯರೆಲ್ಲ, ವಿಶಾನಮ್ಮನ ಯಜಮಾನರ ಮೇಲೆ ಹಲ್ಲು ಮಸೆದು, ಗಂಡುಜಾತಿಯ ಸ್ವಾರ್ಥತೆಗೆ ಮರುಗಿ, ಒಗ್ಗಟ್ಟಿನಿಂದ ಹಸಿರು ರಥಕ್ಕೇ ಓಟು ಕೊಟ್ಟರಂತೆ!

ನಂತರ ವಿಚಾರಿಸಿದಾಗ ತಿಳಿಯಬಂತು—ವಿಶಾನಮ್ಮನ ಮನೆಯಾತ ಚುನಾವಣೆಗೆ ನಿಂತೇ ಇರಲಿಲ್ಲವಂತೆ. ಕೂತೇ ಇದ್ದನಂತೆ ಕಾರು ಸೀಟಿನ ಬುಡದಲ್ಲಿ—ರಥಸಪ್ತಮಿ ಎಳ್ಳು ಬಾಗಿನದ ತಟ್ಟೆ ಜೋಡಿಸಿಕೊಡುತ್ತ!

—ಸುನಂದಮ್ಮ.

---



"ನನ್ನ ಪಿಟೀಲು ವಾದನದ ಬಗ್ಗೆ, ತಾವು ದಯವಿಟ್ಟು ತಮ್ಮ ಸ್ಪಷ್ಟ ಅಭಿಪ್ರಾಯ ತಿಳಿಸಬೇಕು, ಸಾರ್!"

# ನೆಗಡಿಯಿಂದಾದದ್ದು

ನನ್ನ ಸ್ನೇಹಿತನಿಗೆ ನಾನು ಹೇಳುತ್ತಲೇ ಇದ್ದೆ, ತೆಪ್ಪಗೆ ಭೂಮಿ ಕಾಣಿ ನೋಡಿಕೊಂಡು, ಅತ್ತೆ ಮಾವಂದಿರ ಶುಶ್ರೂಷೆ ಮಾಡುತ್ತ, ಮನೆಯಲ್ಲೇ ಇರೋ, ಅಂತ! ನನ್ನ ಮಾತು ಕೇಳಲಿಲ್ಲ ಟಿಕೇಟು ಗಿಟ್ಟಿಸಿ, ನಿಂತೇಬಿಟ್ಟ, ಇಲೆಕ್ಷನ್ ಜೂಜಿಗೆ. "ಜಯಾಪಜಯುಗಳು ಅದೃಷ್ಟವನ್ನೇ ಅವಲಂಬಿಸಿರುವುವು" ಎಂದ. ಯಾರಿಗೋ ಕೈ ತೋರಿಸಿ, ಅದು ಲಕ್ಷಣ ಅಂತ ಅನ್ನಿಸಿಕೊಂಡುಬಿಟ್ಟ. ಅವನ ಹೆಸರು ಪೇಪರಲ್ಲೂ ಬಂತು, ಆರು ಕಾಸಿನ ಪತ್ರಿಕೆಯಲ್ಲೂ ಹಾರಾಡುವುದಕ್ಕೆ ಷುರು!

ಸರಿ! ಇನ್ನು, ಪ್ರಚಾರಕ್ಕೆ ಪ್ರಾರಂಭ! ಕಾರು, ಪೋಸ್ಟರು, ಲೌಡ್‌ಸ್ಪೀಕರು, ತಡಿಕೆ ಮಡಿಕೆ,—ಹೀಗೆ ಕುಡಿಕೆ ಹಣ ಕರಗಿತು. ಆ ಊರಿನವರೋ....ಪ್ರಚಂಡರು. ನೀವು ನಮ್ಮಲ್ಲಿ ಬಂದು ಒಂದೇ ಒಂದು ಮಹಾಸಭೆ ನಡೆಯಿಸಿ, ಒಂದು ಭಾಷಣ ಮಾಡಿ ಸಾಕು ಬೇಕಾದರೆ, ನಿಮ್ಮ ಭಾಷಣಕ್ಕೆ ಮೊದಲು, ಒಳ್ಳೆಯ ಪ್ರಾಯದ ಹುಡುಗಿಯದೊಂದು ಡ್ಯಾನ್ಸ್ ಇಡಿಸಿ; ಭಾಷಣವಾದ ಮೇಲೆ, ಅಷ್ಟೇ ಪ್ರಾಯದ ಮತ್ತೊಬ್ಬರಿಂದ ಒಂದು ಸಂಗೀತ; ಅಥವಾ ಹೆಣ್ಣು ಮಕ್ಕಳದೊಂದು ಸರ್ಕಸ್ಸು.... ಬೇಡ, ಅವರನ್ನೇ ಸೇರಿಸಿ ಅವರೊಬ್ಬೊಬ್ಬರಿಗೂ ಒಂದೊಂದು ಸೈಕಲ್ ಕೊಟ್ಟು, ಊರಲ್ಲೊಂದು ಮೆರವಣಿಗೆ.....ಹೀಗೆ, ನನ್ನ ಸ್ನೇಹಿತನಿಗೆ ಸಲಹೆ ಮಾಡಿದರು. ತಮ್ಮೂರು ಜನರಿಗೆ ಈ ನೆಪದಲ್ಲಾದರೂ, ಅಂಥ ಮನಮೋಹಿನಿಯರನ್ನು ನೋಡುವ ಅವಕಾಶ ಸಿಗಲಿ ಎಂಬುದು ಅವರ ಉದ್ದೇಶ. ಯಾವ ಯಾವ ಮಹಿಳಾಮಣಿಗಳಿಗೆ ಕಂಟ್ರ್ಯಾಕ್ಟ್ ಕೊಡಬಹುದು ಎಂಬುದನ್ನೂ ಅವರೇ ಪಟ್ಟಿ ಮಾಡಿ ಒಪ್ಪಿಸಿದರು.

ಆದರೆ, ನನ್ನ ಸ್ನೇಹಿತನಿಗೆ ನಾನು ಹೇಳಿದೆ; "ಲೋ, ಮಂಕೆ! ನಿನ್ನ ಭಾಷಣ ಮುಖ್ಯ....ಅದರಲ್ಲಿ ನೀನು ಎಷ್ಟು ಜೋರಾಗಿ ಕೂಗಿ ರೇಗುತ್ತೀಯೋ ಅಷ್ಟಕ್ಕಷ್ಟ ಓಟುಗಳುದುರುತ್ತವೆ....ನೃತ್ಯದವರನ್ನ ನೋಡುತ್ತ ಕುಳಿತಿರುವ ಜನ ನಿನ್ನ ಭೃತ್ಯರಾಗುತ್ತಾರೇನೋ?" ಅಂದೆ. ಆ ಊರಿನವರೂ ಬುದ್ಧಿವಂತರು. ಮೆತ್ತಗೆ, ನನ್ನ ಸ್ನೇಹಿತನನ್ನ ತಮ್ಮ ಉಪಚಾರದಿಂದಲೇ ಸೋಲಿಸಿಬಿಟ್ಟರು. ಅವರಿಗೆ ಬೇಕಾಗಿದ್ದದ್ದನ್ನೆಲ್ಲ ಅವನಿಂದ ಕಸಿದುಕೊಂಡರು.

ಹೇಗೆ, ಅಂತೀರೋ? ನೆಗಡಿಯ ಮೂಲಕ ನನ್ನ ಸ್ನೇಹಿತ ಕಾರಿಂದಿಳಿಯುತ್ತಲೂ, ಅವನ ಕುತ್ತಿಗೆಗೆ ಒಂದಾದ ಮೇಲೊಂದು ಐವತ್ತೆಂಟು ಹಾರ ಹಾಕಿದರು....

ತಣ್ಣಗೆ, ನೀರು ಚಿಮುಕಿಸಿದ ದಂಡೆಗಳನ್ನ ...ಒಂದನ್ನೂ ತೆಗೆಯಬಾರದು, ಫೋಟೋ ಇದೆ ಎಂದರು. ಒಂದೂಕಾಲು ಗಂಟೆ ಕಾಲ, ಪಾಪ, ಅವನು ಆ ಒದ್ದೆಯ ಮುದ್ದೆಯನ್ನ ಹೊತ್ತು ತಿರುಗಿದ. ಫೋಟೋಗೆ ಮುಂಚೆ, ಅವನ ಬಟ್ಟತಲೆಗೆ ಪನ್ನೀರು ಅಭಿಷೇಕ ಮಾಡಿದರು, ಕೇವಲ ಚಿಮುಕಿಸುವುದರಿಂದಲೇ....ಕರ್‌ಚೀಫ್ ನಿಂದ ಒರಸಬೇಡಿ, ಸಾರ್, ಸ್ಪೆಷಲ್ ಪನ್ನೀರು, ನಮ್ಮೂರು ರಾಮೇಶೆಟ್ಟರ ಅಂಗಡೀದು, ಅಂತ ಹೇಳಿ, ಆ ಬಟ್ಟೆಯು ಚೂರನ್ನೊಳಗಿರಿಸುವಂತೆ ಮಾಡಿದರು. ಮೆರವಣಿಗೆಯಲ್ಲಿ ಅವನನ್ನ ಸಭಾಂಗಣಕ್ಕೆ ಕರೆದೊಯ್ದಾಗ, ಅವನ ಮುಂದುಗಡೆ ಮೂರು ಕೋಲಾಟದ ಪಾರ್ಟಿಗಳನ್ನಿಟ್ಟು ಕುಣಿಸಿ ಧೂಳೆಬ್ಬಿಸಿ, ಅವನ ಬಾಯ್ಗೆ ಮಣ್ಣು ಬೀಳುವಂತೆ ಏರ್ಪಡಿಸಿದರು. ಮೊದಲೇ, ತೀರಕೆಟ್ಟ ತುಪ್ಪದಲ್ಲಿ ಮಾಡಿದ್ದ ಸಜ್ಜಿಗೆ ತಿನ್ನಿಸಿದ್ದರಿಂದ, ನನ್ನ ಸ್ನೇಹಿತನ ಗಂಟಲು ಕರಕರಮಾಡುತ್ತಿತ್ತು. ಬರ ಬರುತ್ತ, ಅವನ ಗಂಟಲು ಗಡಸಾಯಿತು. ನಾದಕ್ಕೆ ಬದಲು ವೇದನೆ ಮೊದಲಾಯಿತು. ಧೂಳು ಕುಡಿದು, ನಾಳ ಭರ್ತಿಯಾಯಿತು. ಬಯಲಿಗೆ ಬಂದಾಗ, ಮಾತೇ ಹೊರಡದು. ಭಾಷಣ, ಭಾಷಣ, ಅಂತ ಜನವೇನೋ ಕೂಗುತ್ತಿದಾರೆ. ಆದರೆ, ಮಾತೇ ಹೊರಡಲಿಲ್ಲ, ಅವನ ಬಾಯಿಂದ. ಧರ್ಮಸಂಕಟ! ತನ್ನ ಬಣ್ಣಿಸುವುದು ಹಾಗಿರಲಿ, ಅನ್ಯರಿಗೆ ಅಸಹ್ಯಪಡದಿದ್ದರೆ, ಚುನಾವಣಾ ಪ್ರಚಾರ ಭಾಷಣ ಹೇಗಾದೀತು? ಅದಕ್ಕೂ ಬಾಯಿಲ್ಲ...ಜನಸಂದಣಿ ಭಾಷಣ ಭಾಷಣ ಅಂತ ಕೂಗುತ್ತಲೇ ಇದ್ದರು. ಆದರೆ, ನನ್ನ ಸ್ನೇಹಿತ ಎದ್ದ, ಕೈಮುಗಿದ, ಕೂತ. ಅವನ ಕಣ್ಣಲ್ಲಿ ನೀರು, ಗಂಟಲಲ್ಲಿ ಕಲ್ಲು! "ಏಯ್! ಇವನೆಂಥ ಮೆಂಬರೋ?" ಅಂತ ಜನಸಮೂಹ ನಕ್ಕಿತು. 'ಬನ್ರೋ' ಅಂತ ಹಲಕೆಲವರು ರೇಗಿದರು. ಸಭೆ ಕರಗಿತು. ನನ್ನ ಸ್ನೇಹಿತ, ಕೊರಗಿದ. ಸೋತು, ಮನೆ ಮಂಚದ ಮೇಲೆ, ಒರಗಿದ.

—ರೇವಣ್ಣ.

---

ವೇಷವ ಧರಿಸಿ ಫಲವೇನಯ್ಯ, ವೇಷದಂತಾಚರಣೆ ಇಲ್ಲದನ್ನಕ್ಕ? ದ್ವೇಷವ ಮೆರೆಸಿ ಫಲವೇನಯ್ಯ, ದ್ವೇಷದಂತಾಚರಿಸೆ ಬಲವಿಲ್ಲದನ್ನಕ್ಕ? ಏಸ್ಯವ ದೂರಿ ಫಲವೇನಯ್ಯ, ಏಸ್ಯದಂತಾಧ್ಯಾತ್ಮ ಬಲವಿಲ್ಲದನ್ನಕ್ಕ? ಈರ್ಷ್ಯೆಯ ತೋರಿ ಫಲವೇನಯ್ಯ, ಈರ್ಷ್ಯೆಗನುಸಾರವಾಗಿ ಇರಿಯುವ ಶಕ್ತಿಯಿಲ್ಲದನ್ನಕ್ಕ? ನೀರಿಲ್ಲದ ಕೆರೆಗಳ ತೋಡಿ, ಬತ್ತುವ ಕನ್ನಂಬಾಡಿಯನು ಕಟ್ಟಿ, ವಿದ್ಯುತ್‌ವಾಹಿನಿ ಯದ್ವಾತದ್ವಾ ಹರಿಯುವ ತಂತಿಯನೆಳೆದರೆಂತಯ್ಯ, ಹರಕು ಕುಪ್ಪಸ ಚಳಿ ತಡೆಯಬಲ್ಲುದೇ, ಕೇಳಿದಳು ನಮ್ಮ ಕೊರವಂಜಿ ಕಾಯುವಪರಂಜಿದೇವಿ.

# ಮಧ್ಯಂತರ ಕವಿಜೀವನ ವಿಚಾರ

## (ಜನವರಿ 22, 1565—ಸಂಜೆ)

ಸನ್ 1565 ನೇ ಇಸ್ವಿಯಲ್ಲಿ ಯಾವುದೋ ಒಂದು ತಿಂಗಳು. ಅದರಲ್ಲಿ ಯಾವುದೋ ಒಂದು ದಿನ. ಕೊಲಂಬಸ ಮಹಾಶಯನು ಅಮೆರಿಕವನ್ನು ಕಂಡು ಹಿಡಿದಿದ್ದ, ಇಲ್ಲವೇ ಹಿಡಿಯಲಿದ್ದ. ಅಕಬರ ಬಾದಶಹನು ದಿಲ್ಲಿಯ ಸಿಂಹಾಸನದಲ್ಲಿ ವಿರಾಜಮಾನನಾಗಿ ಕುಳಿತಿದ್ದ. ಅತ್ತ ಇಂಗ್ಲೆಂಡ್ ದೇಶದಲ್ಲಿ ಬರ್ನ್ಸ್ ಮತ್ತು ಜೋನ್ಸ್ ಎಂಬ ವಿಜ್ಞಾನಿಗಳಿಬ್ಬರು ಹೀಗೆಂದು ಸಂಭಾಷಿಸುತ್ತಿದ್ದಾರೆ.

**ಬರ್ನ್ಸ್**—Goddam thee Jones, Methinketh this is Dynamics.

**ಜೋನ್ಸ್**—Thou uttereth truth Burns, thou product of hell, this is unmistakably, Dynamics as thou uttereth.

ಅದೇ ಹೊತ್ತಿನಲ್ಲಿ ವಿಜಯನಗರದಲ್ಲಿ ಚಕ್ರವರ್ತಿ ರಾಮರಾಜ ಚಿಂತಾಗ್ರಸ್ತನಾಗಿ ಕುಳಿತಿದ್ದ. ಅವನು ಮಹಾವೀರ. ಆದರೆ ವಿಜಯನಗರದ ಮ್ಯಾನೇಜ್‌ಮೆಂಟ್ ಅವನ ಕೈಲಾಗುತ್ತಿರಲಿಲ್ಲ. ರಾಮರಾಜನು ಆಂಧ್ರನಾದುದರಿಂದ ಕನ್ನಡಿಗರೇ ಬಹು ಸಂಖ್ಯೆಯಲ್ಲಿದ್ದ ಸೆಕ್ರಟೇರಿಯಟ್ ಆಲಸ್ಯದಿಂದ ತುಂಬಿತ್ತು. ಪ್ರೌಢ ದೇವರಾಯ, ಕೃಷ್ಣದೇವರಾಯರ ಕಾಲದಲ್ಲಿ ಅರಮನೆಯ ಸುತ್ತಮುತ್ತಲೂ ಕಬ್ಬಕ್ಕಿಗಳಂತೆ ಕವಿದಿರುತ್ತಿದ್ದ ಕನ್ನಡ ಕವಿಗಳು ಒಬ್ಬರೂ ಕಾಣಬರುತ್ತಿಲ್ಲ.



ರಾಮರಾಜ ಚಿಂತಾಗ್ರಸ್ತನಾಗಿ ಕುಳಿತಿದ

ಆಗ, ಬಿಜಾಪುರದಲ್ಲೋ, ಗುಲ್ಬರ್ಗದಲ್ಲೋ, ಗೋಲ್ಕೊಂಡದಲ್ಲೋ ಸೀಮೆಯ ಮೇಲಿರುವ ಸಮಸ್ತ ಮರ್ಹಾ ಮರ್ಹಾ ಖಾನಖಾನರೂ, ಬಹಮನೀರಾಜ್ಯದ ದುಷ್ಮನ್ ಆದ ವಿಜಯನಗರವನ್ನು, ಖತಂಮಾಡಲು ಖುದಾಕೆ ಕಸಂ ಪ್ರತಿಜ್ಞೆಮಾಡಿ ಹೊರಟಿದ್ದಾರೆ.

ಇನ್ನೇನು ತಾಳೀಕೋಟೆಯ ಯುದ್ಧವಾಗಲಿದೆ. ವಿಜಯನಗರದ ಪತನವಾಗಿ ಕನ್ನಡಿಗರ (ಆಗಿನ ಕನ್ನಡಿಗರ ದೃಷ್ಟಿಯಲ್ಲಿ ಆಂಧ್ರರ) ಯಶೋ ಪತಾಕೆ ಮಣ್ಣು ಗೂಡಲಿದೆ.

ಸಂಧ್ಯಾಕಾಲವು. ಭಗವಾನ್ ಭಾಸ್ಕರನು. ಅಸ್ತಾಚಲಮಂ ಸಾರುತಿರ್ಪನು.

ಆಗ—ಘಟ್ಟದ ಕೆಳಗೆ—

ಉಡುಪಿಯ ಶ್ರೀ ಕೃಷ್ಣನ ಮುಂದೆ ವೃದ್ಧರಾದ ಕನಕದಾಸರು ನಿಂತಿದಾರೆ. ಕಣ್ಣುಗಳು ಅರೆಮುಚ್ಚಿವೆ. ಆನಂದಾಶ್ರುಗಳು ಹೊರಸೂಸುತ್ತಿವೆ. ಅದು ಅವರ ಜೀವನದ ಸಂಧ್ಯೆ.

> ಷಡುರಸದನ್ನಕ್ಕೆ ನಲಿದಾಡುವ ಜಿಹ್ವೆ
> ಕುಡುರುಚಿಗೊಂಡರೆ ಆ ರುಚಿ ನಿನದಯ್ಯ
> ನವಮೋಹನಾಂಗಿಯರ ರೂಪವ ಕಣ್ಣಿಂದ
> ಎವೆಯಿಕ್ಕದೆ ನೋಡುವ ನೋಟನಿನದಯ್ಯ

ಎಂದು ಪಾಡುತ್ತಿದ್ದಾರೆ. ಆಹಾ! ವಿಜಯನಗರದಲ್ಲಿ ಕನ್ನಡಿಗರಿರುವನಕ, ಉದಾ—ಕೃಷ್ಣದೇವರಾಯನಿರುವನಕ ಎಷ್ಟು ಚೆನ್ನಾಗಿತ್ತು! ಆಂಧ್ರ ರಾಮರಾಜ ಬಂದ. ಎಲ್ಲಾ ಕನಸು! ಉಸ್! ಹೋಗಲಿ ಈಗೇಕೆ ಆ ನೆನಪು.

ಮೇಲೆ ಹೇಳಿದ ಕೆಲವು ನವಮೋಹನಾಂಗಿಯರು ಉಡುಪಿಯ ಶ್ರೀಕೃಷ್ಣನ ಮುಂದೆ ಸಂಧ್ಯಾನರ್ತನ ಮಾಡುತ್ತಿದ್ದಾರೆ. ಕನಕದಾಸರು ಅದನ್ನು ನೋಡಿದರು. ಆದರೆ 'ಚಿಂತೆಯೇತಕ್ಕಿನ್ನು ಬಯಲಪ್ಪ ದೇಹಕ್ಕೆ?' ಕನಕದಾಸರು ತಂಬೂರಿ ಮಿಡಿದರು. ಅವರ ಗಾಯನ ಮುಂದುವರಿಯಿತು.

> ಮಾಯಾಪಾಶದ ಬಲೆಯೊಳಗೆ ಸಿಲುಕಿರುವಂಥ
> ಕಾಯ, ಪಂಚೇಂದ್ರಿಯಗಳು ನಿನ್ನವೋ !

ಅದೇ ಸಮಯದಲ್ಲಿ-ಮಲೆನಾಡಿನ ಹೃದಯದಲ್ಲಿ—

ಸಾಗರದ ಅರಮನೆಯಲ್ಲಿ ಅಧಿಪ ಸಾಳ್ವದೇವನು ತನ್ನ ಕೋಣೆಯಲ್ಲಿ ಮಂಚದ ಮೇಲೆ ಕುಳಿತಿದಾನೆ. ಅವನಿದಿರಿನಲ್ಲಿ ಸಾಜಕವಿರಾಜ ಸಾಳ್ವ (He delighted you in 'Sharadavilasa'!) ಸುಖಾಸನವೊಂದರಮೇಲೆ ಕುಳಿತಿದ್ದಾನೆ

ಯಥಾಪ್ರಕಾರ, ಎಲ್ಲ ಕನ್ನಡ ಕವಿಗಳಂತೆ ಸಾಳ್ವನು ತನ್ನ ವಾಚಕನಾದ ಸಾಳ್ವದೇವನಿಗೆ ಬೈರಿಗೆ ಕೊರೆಯುತ್ತಿದಾನೆ. ವಿಷಯ—ಲೋಲಾಕ್ಷಿಯ ಮನೋವಿಕಾರಗಳು.

ಲೋಲಾಕ್ಷಿಯ ಮನೋವಿಕಾರಗಳನ್ನು ವರ್ಣಿಸುತ್ತಾ ಸಾಳ್ವನಿಗೆ ಅತೀವ ಉತ್ಸಾಹವುಂಟಾಗಿದೆ—

"ಲೋಲಾಕ್ಷಿಯು ಇನಿಯನನ್ನು ನೋಡಿದಳಲ್ಲಾ! ಅದಕ್ಕೆ ಚಕ್ಷುಪ್ರೀತಿಯೆನ್ನುತ್ತಾರೆ. ಅವನನ್ನು ನೆನೆದಳಲ್ಲ ಅದು ಮನಸ್ಸಂಗ. ಇನಿಯನನ್ನು ಬಯಸಿ (ಅವನು ಕೈಗೆಟುಕದೆ) ಬಡವಾದಳಲ್ಲ ಅದೇ ಕಾರ್ಶ್ಯ. ಅವಳ ಮೈನವಿರೆದ್ದಿತಲ್ಲಾ ಅದೇ ಪುಳಕ. ವಿರಹವ್ಯಥೆಯಿಂದ ಕಣ್ಣೀರಿಟ್ಟಳಲ್ಲಾ ಅದೇ ಅಶ್ರು...."

ಆದರೆ ಸಾಳ್ವದೇವನಿಗೆ ಹೊಟ್ಟೆನೋವು ಹತ್ತಿತ್ತು. ಆ ದಿನ ಸವಡುರೊಟ್ಟಿ ಹಾಲುಗಾರಿಗೆ, ಘರಿವಿಳಂಗಾಯಿಗಳನ್ನು ತಿಂದು ಹೊಟ್ಟೆಶೂಲೆ ಆರಂಭವಾಗಿತ್ತು. ಅವನ ಆಸ್ಥಾನಿಕರನೇಕರಿಗೆ ವಾತ, ಪಿತ್ತ, ಶ್ಲೇಷ್ಮ ಅತಿಸಾರಗಳು ಅಂಟಿದ್ದುವು. ಸಾಳ್ವದೇವನು 'ಭೋ ಸಾಜಕವಿರಾಜಾ! ನನಗೆ ಲೋಲಾಕ್ಷಿಯ ಮನೋವಿಕಾರಗಳ ಪಟ್ಟಿಬೇಡ. ಔಷಧಿಯಿದ್ದರೆ ಹೇಳು' ಎಂದ.

ಸಾಳ್ವಕವಿ ಬೆದರಲಿಲ್ಲ. ಅವನು ಸವ್ಯಸಾಚಿ. ಕಾವ್ಯ ಬೇಕು ಎಂದರೆ 'ತಗೋ' ಎನ್ನುತ್ತಿದ್ದ. ಔಷಧ? ಅದೂ ತಯಾರಾಗಿದೆ.

'ಭೋ ಸಾಮಂತಶಿಖಾಮಣೀ ಆನಂದಭೈರವಿ ಸಿದ್ಧವಾಗಿದೆ' ಎಂದ ಸಾಳ್ವ.

ಸಾಳ್ವದೇವನ ತಲೆಗೆ ಚಕ್ಕರ್ ಬಂತು. ಈ ಮಹನೀಯ, ಮಧ್ಯಾಹ್ನದಿಂದಲೂ ಬೋರಗಳೆ ಊದುತ್ತಿದ್ದವನು, ಔಷಧಿ ಕೇಳಿದರೆ ಆನಂದಭೈರವಿ ಹಾಡುತ್ತಾನಂತೆ! ಈಗಲೇ ಕರುಳು ಕುದಿಯುತ್ತಿದೆ. ಇವನ ಸಂಗೀತದಿಂದ ತಲೆಯೂ ಬಿರಿದುಹೋದರೆ? ಸಾಳ್ವದೇವ 'ಇದು ಸಾಧ್ಯಮಿಲ್ಲಂ' ಎಂದು ನಿರ್ಧರಿಸಿ ಹೀಗೆಂದ—"ಯಾರೋ ಅಲ್ಲಿ? ಒಂದು ವೀಣೆಯನ್ನೂ, ಮೃದಂಗವನ್ನೂ, ತಂಬೂರಿಯನ್ನೂ ಒಯ್ದು ಕವಿರಾಜನ ಮನೆಯಲ್ಲಿಡಿರಿ. ಕವೀಶ್ವರಾ! ನಿನಗೆ ಆನಂದಭೈರವಿ ಹಾಡಬೇಕೆನ್ನಿಸಿದರೆ ಮನೆಗೆ ಹೋಗಿ ಹಾಡಿಕೋ. ನನ್ನ ಅಂಗಾಂಗಗಳೆಲ್ಲಾ ಮುಖಾರಿ, ತೋಡಿಗಳನ್ನು ಹಾಡ್ತುತ್ತಿವೆ. 'ಕದನ ಕುತೂಹಲ'ವನ್ನು ಹಾಡಲಾರಂಭಿಸಿದರೆ ಫಜೀತಿಯಾದೀತು"

ಸಾಳ್ವ ಉತ್ತರಿಸಿದ "ಹಾಗಲ್ಲ ಸಾಮಂತಭೂಮೀಪಾಲ ಶಿರೋಮಣೀ! ಆನಂದಭೈರವಿಯೆಂಬುದು ಲೇಹ"

ಆ ಕ್ಷಣದಲ್ಲಿ ಮಹಾರ್ ಖಾನಖಾನರು ಅತ್ತ ಸೈನ್ಯ ಜಮಾವಣೆ ಮಾಡಿ ಅಶ್ವಗಳನ್ನಾರೋಹಿಸಿ ಕಿವಿಗಳು ಗಡಚಿಕ್ಕುವಂತೆ ಡೋಲ್‌ಬಜಾವಣೆ ಮಾಡುತ್ತಾ

ವಿಜಯನಗರದಮೇಲೆ ನುಗ್ಗುತ್ತಿದ್ದರೆ ಆ ಸುದ್ದಿ ಇವರಿಗೆ ಹತ್ತಲೇ ಇಲ್ಲ ಸಾಳ್ವ, ಸಾಳ್ವದೇವರನ್ನೇ ಏಕೆ ಉದಾಹರಿಸಬೇಕು. ಇವರಂತಹವರು ಸಾವಿರಜನ. ಚಿತ್ರದುರ್ಗ ಜಿಲ್ಲೆಯ ಕಾಕೊಳಲಿನ ರಾಮರಾಜನು, ಬತ್ತೀಸಪುತ್ತಳೀಕತೆಯನ್ನೂ, ಹದಿನಾಡುರಾಜ ಚೆನ್ನರಾಜನು ವೈದ್ಯಸಾರ ಸಂಗ್ರಹವನ್ನೂ ಅದೇ ಕ್ಷಣದಲ್ಲಿ ರಚಿಸುತ್ತಾ ಕುಳಿತಿದ್ದರು. ಕರ್ಣಾಟಕ (ಅವರೆಲ್ಲರ ದೃಷ್ಟಿಯಲ್ಲಿ ಆಂಧ್ರ) ಸಾಮ್ರಾಜ್ಯಕ್ಕೆ ಗಂಡಾಂತರ ಒದಗಿದ ಸುದ್ದಿಯೇ ಅವರಿಗೆ ತಿಳಿದಿರಲಿಲ್ಲ.

ಅಂದೇ ಆ ಕ್ಷಣದಲ್ಲೇ–ಮಲೆನಾಡಿನಲ್ಲಿ—

ಬಾಳೆಯ ಹಳ್ಳಿಯಲ್ಲಿ, ದಿಗಂಬರ ಮುಕ್ತಿ ಮುನಿಯ ಶಿಷ್ಯನಾದ ಕುಮಾರ ಚೆನ್ನಬಸವೇಶನು ತನ್ನ ಮಠದಮೇಲೆ ದುರಾಕ್ರಮಣ ಮಾಡಿದ್ದ ಪರವಾದಿಗಳನ್ನು ಸಂಹರಿಸಿ, ಮಠಕ್ಕೆ ಬಂದು ಶಿವಪೂಜೆಮಾಡಿ, ಆರೋಗಣೆಯನ್ನು ಮುಗಿಸಿದನು.

ರಣರಂಗಕ್ಕೆ ಹೊರಟ ಖಾನಖಾನರು ಕಾಲಾಳುಗಳನ್ನು 'ದೌಡೋ ದೌಡೋ' ಎಂದೂ, ನಿಂತ ರಥಗಳ ರಥಿಕರಿಗೆ 'ಧಕಲೋ, ಅಬ್ಬಿ ಜರ ಧಕಲೋ, ಜಾನ್ದೋ ಸೀದಾ ಜಾನ್ದೋ' ಎಂದೂ ಪ್ರೋತ್ಸಾಹ ಕೊಟ್ಟು ಯುದ್ಧಾಗ್ನಿಯನ್ನು ಹೊತ್ತಿಸುತ್ತಿದ್ದರು.

ಶ್ರೀ ಶ್ರೀ ಶ್ರೀ ಕುಮಾರ ಚೆನ್ನಬಸವೇಶನಿಗೆ ಇದು ತಿಳಿಯುವುದಾದರೂ ಎಂತು? ಅವನು ಸಾಸಲು ಭೈರವೇಂದ್ರ ಚರಿತೆಯನ್ನು ಬರೆಯಲು ಉಜ್ಜುಗಿಸಿ, ಸನ್ಮತಿ ನೀಡಿರೆಂದು ಬಾಣ, ಅಮಳ, ಶೃಂಗಾರಕವಿ, ಹರೀಶ್ವರ ಪದ್ಮರಾಜರಿಗೆ ಎರಗಿ, ಸನ್ಮತಿ ಬಂದಕೂಡಲೇ ಕಂಠಪತ್ರವನ್ನೆತ್ತಿ ಕೊರೆಯಲಾರಂಭಿಸಿದನು.

ಆತನ ಕೀರ್ತಿಯ ಕಿಡಿಯೊಂದು. ದಿಗಂತಕ್ಕೆ ಹಾರಿ ಅಲ್ಲಿ ಉರಿಯುತ್ತಿದ್ದ ಯುದ್ಧಾಗ್ನಿಯನ್ನು ಕಂಡು ಹಿಂತಿರುಗಿ ಬಂದು 'ಕವಿರಾಜಾ, ನೀನು ವೀಭೂತಿ ಮಹಾತ್ಮ್ಯ ಬರೆದರೆ ಚೆನ್ನು' ಎಂದಿತು

ಆ ಕೀರ್ತಿಯ ಕಿಡಿಗೆ, ಅವನನ್ನು ಹಂಗಿಸುವ ಅವಶ್ಯಕತೆ ಇರಲಿಲ್ಲ. ಆ ಕ್ಷಣದಲ್ಲೇ ಮಹಾಂತಸ್ವಾಮಿಯು ಶಾಂತವೀರಸ್ತುತಿಯನ್ನೂ, ಶಾಂತೇಶನು ತೋಂಟದ ಸಿದ್ದೇಶ್ವರನ ಸ್ತುತಿಯನ್ನೂ ವಿರಚಿಸುತ್ತಿದ್ದರು. ಗುರುಲಿಂಗವಿಭು ಮುಗಿದುಹೋದ ತನ್ನ ಕ್ರಾವ್ಯಕ್ಕೆ ಭಿಕ್ಷಾಟನ ಚರಿತೆಯೆಂದು ಹೆಸರಿಟ್ಟು ಮಲಗುವುದರಲ್ಲಿದ್ದ.

ಆ ಸಮಯದೊಳ್, ತುಳುವದೇಶದ ಮೂಡಬಿದರೆಯೊಳ್, ಭೈರಸ ಒಡೆಯರ ಪುತ್ರಿಯೊಳೆ ನೇಹದಿಂದಿರ್ದು, ಪಲಾಯನ ಸೂತ್ರಮಂ ಪಠಿಸಿ ತನ್ನ ಮಂಚದಡಿಯೊಳಿರ್ದ ವೇಶ್ಯಾಮುಖಾವಲೋಕನ ಸಂಚಲಿತಾಂತರಂಗ ಚಿತ್ತನಾಗಿ ಕೆಲಕಾಲಂ ಕಳೆಯೆ, ದೇಹಧೃತಿಯಡಗೆ ರತ್ನಾಕರವರ್ಣಿ ಕವೀಶ್ವರಂ, ಈ ಲೋಕದಿರವಿಂಗೆ

ಬೇಸರುತೆ, ನಿಜಾಂಗನೆ ತವರೂರಿಗೆ ಪೋಗಿರೆ ಮುಕ್ತ್ಯಂಗನಾ ಸಂಗಮಂ ಪಡೆಯಲರೆ ಮನಮಂ ಮಾಡುತೆ ತನ್ನದೊಂದು ಪದಮನಿಂತೆಂದು ಪಾಡುತಿರ್ದಂ.

ನಳಿತೋಳಳಿನೆ ತೆಕ್ಕೆಯಾದಂತೆ ಪೊಂಗೊಡ
ಮೊಲೆಯೆಂದೊಡೆದೆ ಸೋಂಕಿದಂತೆ
ತಳಿದುರ್ಗಟಿಯೆನಲು ಚುಂಬಿಸಿದಂತೆ ನಲಿವರುಂ
ಟೆಳಿವರಾರಧ್ಯಾತ್ಮರಸಕೆ?

ಹೌದು! ಯಾರು ಅಧ್ಯಾತ್ಮರಸಕ್ಕೆ ಇಳಿಯುವವರು? ರಾಮರಾಜನಂತೂ ಆಧ್ಯಾತ್ಮರಸಕ್ಕಿಳಿಯುವ ಹಾಗಿರಲಿಲ್ಲ ಮಹಾರ್ ಮಹಾರ್ ಖಾನಖಾನರನ್ನೆದುರಿಸಲು ಸೈನ್ಯವನ್ನು ಕೂಡಿಸುತ್ತ ಅವನಿಗೆ ಫಜೀತಿಯಾಗಿ ಹೋಗಿತ್ತು.

ಸಮರಾಂಗಣಕ್ಕೆ ಇಳಿಯುವ ಸಮಯ—

ತಾಳಿಕ್ಕೋಟೆಯ ಯುದ್ಧದಲ್ಲಿ ಆಗಬಾರದದ್ದು ಆಗಿಹೋಯಿತು. ಕರ್ಣಾಟಕ ಸಾಮ್ರಾಜ್ಯ (ಯುದ್ಧವಾಗುವ ಸಮಯದಲ್ಲಿ ಕನ್ನಡಿಗರ ದೃಷ್ಟಿಯಲ್ಲಿ-ಆಂಧ್ರ) ಮಣ್ಣು ಮುಕ್ಕಿತು. ಹಿಂದೆ ಕಾಣದ, ಅಂದು ಇರದ, ಮುಂದೆ ಬರದಂಥ ವಿಜಯನಗರ ಧ್ವಂಸ ವಾಯ್ತು. ಹೇಮಕೂಟದ ಕಂದರ ಕಿಷ್ಕಿಂಧೆಯಕಣ, ತುಂಗಭದ್ರೆಯ ತೀರಗಳಲ್ಲಿ ಹೆಣದ ಬಣವೆ ಬಿದ್ದಿತು. ಅರಮನೆಗಳು, ಅಂಗಡಿಗಳು, ದೇವಾಲಯಗಳು, ಧರ್ಮ ಛತ್ರಗಳು ಹುಡಿಯಾದವು. ದಕ್ಷಿಣ ಭಾರತವನ್ನಾಳಿದ ಸಾಮ್ರಾಜ್ಯ ನಿರ್ನಾಮ ವಾಯ್ತು.

ಕನ್ನಡದ ಕವಿಗಳು ಮಾತ್ರ ಎಮ್ಮೆಯ ತಮ್ಮಗಳಂತಿದ್ದರು. ಮೊದಲನೆಯ ವಿಶ್ವಯುದ್ಧ 'wasteland' ಉದ್ಭವಿಸಲು ಕಾರಣವಾಯ್ತು. ಆದರೆ ಎರಡನೆಯ ವಿಶ್ವಯುದ್ಧ 'ರಾಮಾಯಣದರ್ಶನ'ಕ್ಕೆ ಮೊದಲೇ ಮುಗಿದುಹೋಯ್ತು.

ಅಂತೆಯೇ ತಾಳೀಕೋಟೆಯ ಯುದ್ಧಾನಂತರ, ಎಳಮಲೆಯ ಗುರುಶಾಂತ ದೇವನು ಲಿಂಗವಿಕಳಾವಸ್ಥೆಯ ವಚನವನ್ನೂ, ಶೃತಕೀರ್ತಿಯು ವಿಜಯಕುಮಾರಿಯ ಕತೆಯನ್ನೂ, ವಾದಿರಾಜನು ಸ್ವಪ್ನಗದ್ಯವನ್ನೂ, ಅದೃಶ್ಯಕವಿ ಶಿವಶರಣರ ಕತೆಗಳನ್ನು ತಿಳಿಸುವ ಪ್ರೌಢರಾಯನ ಕಾವ್ಯವನ್ನೂ ಬರೆದರು.

ಯಥಾಪ್ರಕಾರ ವಸಂತ, ಶರದ, ವೈಕುಂಠ, ಕೈಲಾಸಗಳನ್ನೂ ಸ್ತ್ರೀ ಸೌಂದರ್ಯ, ವಿರಹ, ವೇಶ್ಯಾವಾಟಿಕೆಗಳನ್ನೂ ಸಾವಿರಾರು ಓಲೆಯಗರಿಗಳಲ್ಲಿ ಕೊರೆದರು. ಅಥವಾ ಕಂಡವರ ಮಕ್ಕಳಿಗೆ ಸನ್ಯಾಸ ಕೊಡಿಸುವ ವೈರಾಗ್ಯ ಬೋಧೆಯನ್ನು ಕಂದ, ವೃತ್ತ, ಸಾಂಗತ್ಯಗಳಲ್ಲಿ ಬಾಯಿಗೆ ಬಂದಂತೆ ಬರೆದರು, ಕೈಗೆ ಬಂದಂತೆ ಕೊರೆದರು.

ಏಕೆಂದರೆ—ಕವಿಗಳ ಕೆಲಸ ಕಾವ್ಯರಚನೆಯೇ ಹೊರತು ಸಮಕಾಲೀನ ಜೀವನ ಚಿತ್ರಣವಲ್ಲ. ರಾಜಕೀಯವು, ಕಾವ್ಯದಿಂದ ದೂರವಿರಬೇಕು. ರಾಜ್ಯಗಳು ಆಳಿದರೇನು? ಬೆಳೆದರೇನು? ಕಾಗೆ ಕೂಗುವಂತೆ ಕೂಗುತ್ತಲೇ ಇರುತ್ತದೆ; ಕತ್ತೇ ಕೂಗು ಸಾರೋದ್ಧಾರ ನಡೆದೇ ಇರುತ್ತದೆ; ಕೋಗಿಲೆ ಹಾಡುತ್ತಲೇ ಇರುತ್ತದೆ.

ರಾಮನಿಗೆ ರಾಜ್ಯ ಬಂದರೂ ರಾಗಿ ಬೀಸುವುದು ತಪ್ಪಲಿಲ್ಲ. ಹಾಗೆಯೇ ನಂಗಲ್ ಡ್ಯಾಂ ಆದಾಗಲೂ.

— ಅ. ರಾ. ಸೇ.

---



# ಮುಗಿಲುಹಳ್ಳಿಯಲ್ಲಿ ಚುನಾವಣೆ

## (ರಾಸಭನೋ, ಉಲ್ಲೂಕನೋ, ಸ್ವಪ್ನಸುಂದರಿಯೋ?)

---

ಮುಗಿಲುಹಳ್ಳಿಗೆ ಚುನಾವಣೆಯ ಬಿಸಿ ತಗುಲಿದೆ. ಜನರ ತಲೆಗಳು ಕಾವೇರಿ, ಕೆಟ್ಟುಹೋಗಿವೆ. ಚೆನ್ನಾಗಿದ್ದವರಿಗೆ ಹುಚ್ಚು ಹಿಡಿದಿದೆ. ಬೆಳಗಾದರೆ ರಾದ್ಧಾಂತ.

ರತ್ನಾವಳಿ ಎಕ್ಸ್‌ಟೆನ್ಷನ್ನಿನ (ಮುಗಿಲುಹಳ್ಳಿ ಈಸ್ಟ್ ಕಾನ್ಸ್ಟಿಟ್ಯುಯೆನ್ಸಿಯ) ಚುನಾವಣಾ ಪರಿಸ್ಥಿತಿ ಸ್ವಲ್ಪ ಬದಲಾಗಿದೆ. 'ಯಕ್ಕಯ್ಯನನ್ನು ಎಬ್ಬಿಸಿದವರಾರು?' ಎಂಬುದರ ಮೇಲೇ ಚುನಾವಣೆ ನಡೆಯುತ್ತದೆ. ಆದರೂ ಸಹ ಕಾಂಗ್ರೆಸ್ ಕಪ್ಪಣ್ಣ ನವರು ಜಯಗಳಿಸುವ ಭರವಸೆ ಹೊಂದಿದಾರೆ. ಭಾರತ ಸರ್ಕಾರದ 'ಯಕ್ಕಯ್ಯ ಪಾಲಿಸಿ'ಗೆ ನಿಮ್ಮ ಬೆಂಬಲವಿರುವುದನ್ನು ತೋರಿಸಬೇಕಾದರೆ ಕಪ್ಪಣ್ಣನವರಿಗೇ ನಿಮ್ಮ ಓಟು ಎಂದು ಮುಗಿಲುಹಳ್ಳಿ ಕಾಂಗ್ರೆಸಿಗರು ಪ್ರಚಾರಮಾಡಿ ಜಯವಧುವಿನ ಮಾಲೆ ಯನ್ನು ಎದಿರ್ಗೊಳ್ಳುತ್ತಿದಾರೆ.

ಆದರಿತ್ತ, ಉದಯನ ಎಕ್ಸ್‌ಟೆನ್ಷನಿನಲ್ಲಿ (ಮುಗಿಲುಹಳ್ಳಿ ವೆಸ್ಟ್) ಚುನಾ ವಣೆಯ ಬಣ್ಣ ಪಕ್ಷಾತೀತವಾಗಿದೆ. ರಾಸಭನೋ, ಉಲ್ಲೂಕನೋ, ಸ್ವಪ್ನ ಸುಂದರಿಯೋ? ಎಂಬುದೇ ಓಟುದಾರರಿಗೆ ಅಲ್ಲಿರುವ ಪ್ರಶ್ನೆ.

ಈ ಯದ್ವಾತದ್ವದ ಕೋಲಾಹಲವನ್ನು ವರ್ಣಿಸಲು ನಮ್ಮ ಲೇಖನಿ ಯಶಸ್ವಿ ಯಾಗುವುದೇ ಎಂಬ ಸಂಶಯ ನಮಗಿದೆ. ಆದರೆ ನಾವು ಮಾಡು ಇಲ್ಲವೇ ಮಡಿ ಎಂಬ ತತ್ವದ ಅನುಯಾಯಿಗಳು. ಲೋಕಚಾಪಲ್ಯ ಇನ್ನೂ ಬಹಳ ಇರುವುದರಿಂದ ಮಡಿಯಲು ನಮಗಿಚ್ಛೆಯಿಲ್ಲ. ಆದುದರಿಂದ ಮಾಡುತ್ತಿದ್ದೇವೆ.

ಮುಗಿಲುಹಳ್ಳಿ ವೆಸ್ಟ್-ಕಾನ್ಸ್ಟಿಟ್ಯುಯೆನ್ಸಿಯಲ್ಲಿ ಏಳು ಕೋಣಗಳ ಸ್ಪರ್ಧೆ ಯಾಗಲಿದ್ದುದು ತಪ್ಪಿ, ಈಗ ಮೂರೇ ಕೋಣಗಳ ಸ್ಪರ್ಧೆ ನಡೆಯಲಿದೆ. ಕಮ್ಯುನಿಸ್ಟ್ P. S. P. ಸೋಷಲಿಸ್ಟ್ ಪಾರ್ಟಿಗಳ ಅಭ್ಯರ್ಥಿಗಳು ನಾಮಪತ್ರ ಕೊಡದಿರಲು ಕಾರಣವಿಷ್ಟೇ ರಾಸಭೇಶ್ವರ, ಭಲ್ಲೂಕೇಶ್ವರನ ಅನುಯಾಯಿಗಳು ಇವರಾರಿಗೂ ಬೆಂಬಲ ಕೊಡುವುದಿಲ್ಲವೆಂದು ತಿಳಿಸಿದರು.

ಕಾಂಗ್ರೆಸ್ ಅಭ್ಯರ್ಥಿಯ ನಾಮ ಪತ್ರಕ್ಕೆ ಸಹಿಯೇ ಇಲ್ಲದುದರಿಂದ ಅದು ಅಸ್ವೀಕೃತವಾಯಿತು.

ಈಗ ಉಳಿದಿರುವ ಸ್ಪರ್ಧಿಗಳು ಮೂವರೇ. ಮೂವರೂ ಸ್ವತಂತ್ರ ಹುರಿಯಾಳುಗಳು. ಭಂಗಿ ಬಸಣ್ಣ, ಬಿಂಕದ ಸಂಕಣ್ಣ ಮತ್ತು ರಾಯರು. ರಾಯರಿಗೆ, ಅ. ಕ. ವಿ. ಪ್ರೇ. ಪ., ಸಾ. ದು. ಗೋಷ್ಠಿ, ಕನ್ನಡ ಮುನ್ನೇತ್ರ ಕಳಗಗಳ ಬೆಂಬಲ ಇದೆ.

ಭಂಗಿ ಬಸಣ್ಣನ ಗುರುತು ಗೂಗೆ. ಬಿಂಕದ ಸಂಕಣ್ಣನದು ಕತ್ತೆ. ಅಪಹಾಸ್ಯವಲ್ಲ ಇದು. ನಮ್ಮೂರಿನ ಉದಯನ ಎಕ್ಸ್‌ಟೆನ್ಷನ್ ಭಾರತದ ಪುಣ್ಯಕ್ಷೇತ್ರಗಳಲ್ಲೊಂದು. ಬಹು ಹಿಂದೆ ಮುಗಿಲುಹಳ್ಳಿಯ ಒಂದು ಗೂಗೆ, ಒಂದು ಕತ್ತೆ, ತಪಸ್ಸು ಮಾಡಿದಾಗ, ಈಶ್ವರನು 'ಢಂ' ಎಂದು ಪ್ರತ್ಯಕ್ಷನಾದನಂತೆ. ಕತ್ತೆ, ರಾಸಭೇಶ್ವರನನ್ನೂ, ಗೂಗೆ ಉಲ್ಲೂಕೇಶ್ವರನನ್ನೂ ಪ್ರತಿಷ್ಠಿಸಿದವು. ಭಂಗಿ ಬಸಣ್ಣ ಉಲ್ಲೂಕೇಶ್ವರನ ಭಕ್ತ. ಬಿಂಕದ ಸಂಕಣ್ಣ ರಾಸಭೇಶ್ವರನ ಭಕ್ತ. ಹೀಗಾಗಿ ಮುಗಿಲುಹಳ್ಳಿ ವೆಸ್ಟಿನ ಓಟುಗಳು ಹರಿಹಂಚಿಹೋಗಿವೆ. ರಾಸಭೇಶ್ವರನ ಭಕ್ತರು ಕತ್ತೆಗಳನ್ನು ಹತ್ತಿ ಸವಾರಿ ಮಾಡುತ್ತಾ ಊರು ತಿರುಗುತ್ತಿದ್ದರೆ, ಉಲ್ಲೂಕೇಶ್ವರನ ಭಕ್ತರು ಗೂಗೆಯೊಂದನ್ನು ಹಿಡಿದು ದೊಡ್ಡ ಪಂಜರದಲ್ಲಿಟ್ಟು ಆ ಪಂಜರವನ್ನು ಪಲ್ಲಕ್ಕಿಯಲ್ಲಿಟ್ಟು, ಪಲ್ಲಕ್ಕಿಯನ್ನು ಹೆಗಲಮೇಲಿಟ್ಟು ಮೆರವಣಿಗೆ ಮಾಡುತ್ತಿದ್ದಾರೆ.

ಬಸಣ್ಣ ಹಿಂದೆ ಕಾಂಗ್ರೆಸ್ಸಿನಲ್ಲಿದ್ದವನು. ಸಂಕಣ್ಣನೂ ಡಿಟೋ. ಮುನಿಸಿಪಲ್ ಮೆಂಬರಾಗಿದ್ದಾಗ, ಕಂಟ್ರಾಕ್ಟ್ ಕೊಡಿಸಿ, ಬಸಣ್ಣ ಸಾವಿರಾರು ರೂಪಾಯಿ ನುಂಗಿದ್ದ. ಸೀಟು ಕೊಡಿಸುತ್ತೇನೆಂದು ಸಂಕಣ್ಣ, ವಿದ್ಯಾರ್ಥಿಗಳ ತಂದೆ ತಾಯಿಗಳಿಂದ ಸಾವಿರಾರು ರೂಪಾಯಿ ಲಪಟಾಯಿಸಿದಾನೆ. ಇಬ್ಬರೂ ಐವತ್ತರ ಹೊಸ್ತಿಲು ದಾಟಿದವರು. ರಾಸಕೇಳೀ ಪ್ರವೀಣರು ಅಂತ ವದಂತಿ. ಇಬ್ಬರೂ ಸಮಸಮ. ಧನ ಬಲ ಇದೆ. ಜನ ಬಲ ಇದೆ.

“ಜಾತೀಯ ವಾದಿಯಾದ ಕತ್ತೆ ಸಂಕಣ್ಣನಿಗೆ ಓಟುಮಾಡಬೇಡಿ” ಎಂದು ಬಸಣ್ಣ ಪ್ರಚಾರಮಾಡುತ್ತಿದಾನೆ “ಮತಿಗೆಟ್ಟು ಗೂಗೆ ಬಸಣ್ಣನಿಗೆ ಓಟು ಕೊಟ್ಟರೆ ನಿಮ್ಮ ಚಟ್ಟ ನೀವೇ ಹತ್ತಿದ ಹಾಗೆ” ಎಂದು ಸಂಕಣ್ಣ. “ಸರಾಯಿಗುಡುಕ ಸಂಕನಿಗೆ ನಿಮ್ಮ ಓಟೇ” ಎಂದು ಬಸಣ್ಣ ಜನರಿಗೆ ಸವಾಲು ಹಾಕಿದಾನೆ. “ಸೂಳೆಗಾರ ಬಸ್ಯನಿಗೆ ನಿಮ್ಮ ಓಟೇ” ಎಂದು ಸಂಕಣ್ಣ. ಆಡಬಾರದ ಹೊಲಸುಮಾತು, ಮಾಡಬಾರದ ನೀಚ ಕೃತ್ಯಗಳ ತವರ್ಮನೆಗಳಂತಿರುವ ಬಸಣ್ಣ, ಸಂಕಣ್ಣ ಇಬ್ಬರಿಗೂ ನಮ್ಮ ಓಟು ಇಲ್ಲ ಎಂದು ಎಕ್ಸ್‌ಟೆನ್ಷನ್ನಿನ ಮಹಿಳೆಯರು ನಿರ್ಧರಿಸಿದರು. ರಾಯರಿಗೇ ನಮ್ಮ ಓಟು ಎಂದು ಅಡುಗೆ ಮನೆಗಳೊಳಗೇ ಮಾತುಕತೆಗಳಾದವು. World loves a lover. ವಿಫಲ ಪ್ರೇಮಿಗೆ ಮನಕರಗದವರಾರು? ಅಂದ ಮೇಲೆ ಅಖಿಳ ಕರ್ಣಾಟಕ ವಿಫಲ ಪ್ರೇಮಿ ಜನ ಪರಿಷತ್ತಿನ ಬೆಂಬಲ ಪಡೆದ ರಾಯರಿಗೆ ಈ ಸಹಾನುಭೂತಿ ದೊರೆತುದು ಆಶ್ಚರ್ಯವೇ?

"ಭಾರತದಲ್ಲಿ ಸ್ನೋ ಮತ್ತು ಲಿಪ್‌ಸ್ಟಿಕ್" "ಭಾರವೂ, ವಾಯಿಲ್ ಸೀರೆಗಳೂ" "ಭಾರತದಲ್ಲಿ ಪ್ರೇಮ ಪರಿಸ್ಥಿತಿ" "ನಮ್ಮ ದೇಶದ ತುಳಸೀ ಕಟ್ಟೆಗಳೂ, ಬನ್ನಿ ಮರಗಳೂ, ಅರಳೀ ಮರಗಳೂ" ಎಂಬ ಲೇಖನ, ಭಾಷಣಗಳ ದೆಸೆಯಿಂದ, ಸ್ತ್ರೀ ಸಮಾಜದಲ್ಲಿ ರಾಯರ ಪ್ರತಿಷ್ಠೆ ಹೆಚ್ಚಿತು. ರಾಯರ ಚುನಾವಣಾ ಸಲಹೆಗಾರರು ಹೇಳಿದ ಪ್ರಕಾರ, ರಾಯರು ಎಕ್ಸ್‌ಟೆನ್ಷನ್ನಿನ ಸ್ವಪ್ನಸುಂದರಿ ಬೀದಿಯಲ್ಲೇ ಬಂದು ನೆಲೆಸಿದರು ರಾಯರು ತರುಣರು, ಅನೇಕ ಪ್ರೇಮಗೀತೆಗಳನ್ನೂ, ಪ್ರೀತಿಯ ಕತೆಗಳನ್ನೂ ಬರೆದವರು ಹೀಗೆ ಅನೇಕ ಸೌಲಭ್ಯಗಳಿರುವ ರಾಯರಿಗೆ ಫೆಬ್ರವರಿ 28ನೇ ತಾರೀಖು ಒಂದು ಸಂಕಟವೊದಗಿತು.

ಉದಯನ ಎಕ್ಸ್‌ಟೆನ್ಷನಿನ ಸ್ತ್ರೀಯರಲ್ಲಿ ಎರಡು ಸಂಘಗಳಿವೆ. ವಿದ್ಯಾವತಿಯರಾದ ಅವಿವಾಹಿತ ತರುಣಿಯರು, ಊರಿಗೆ ಬಂದ ಹೊಸ ಸೊಸೆಯರು, ಇವರದೇ "ಜಾಣ ಹೆಂಗಸರ ಬಳಗ". ಇವರನ್ನು ಕಂಡು ಅಸೂಯೆ ಪಡುವ ಉಳಿದ ಸ್ತ್ರೀಯರದು "ದಡ್ಡ ಹೆಂಗಸರ ಬಳಗ". ಜಾಣ ಹೆಂಗಸರ ಸಂಘಕ್ಕೆ ಸೇರಿರುವ ಕೆಲವರು :—ಸುಚಿತ್ರಾ, ಸ್ನೇಹಲತಾ, ಪ್ರಿಯದರ್ಶಿನಿ, ವಿಮಲಾ, ಲೀಲಾ, ಇತ್ಯಾದಿ. ದಡ್ಡ ಹೆಂಗಸರ ಬಳಗದ ಕೆಲವರು :—ಕರಿಬಸಕ್ಕ, ನರಸಕ್ಕ, ಪುಟ್ಟಿಚೌಡಿ, ಗುಂಡಕ್ಕ. ಈ ಒಳಪಂಗಡಗಳ ಸುಳಿವು ರಾಯರಿಗೆ ಹತ್ತಿರಲಿಲ್ಲ.

ಫೆಬ್ರವರಿ ಇಪ್ಪತ್ತೆಂಟು :—

ರಾಯರು ಚುನಾವಣಾ ಪ್ರಚಾರಕ್ಕೆಂದು ಪ್ರಾತಃಕಾಲ ಎಂಟುಗಂಟೆಗೆ ಹೊರಟರು. ಅವರಿಗೆ ಹೊಸ ಐಡಿಯ ಒಂದು ಹೊಳೆದಿತ್ತು :—

ಉಲ್ಲೂಕೇಶ್ವರ, ರಾಸಭೇಶ್ವರ, ಇಬ್ಬರೂ ಕಾಮವನ್ನು ಸುಟ್ಟವರು. ನಾನಾದರೋ ಮನ್ಮಥ ಪಕ್ಷಪಾತಿ. ಆದುದರಿಂದ ಕತ್ತೆ, ಗೂಗೆಗಳಿಗೆ ನಿಮ್ಮ ಓಟು ಇಲ್ಲ. ನನಗೇ ನಿಮ್ಮ ಓಟು.

ಈ ಐಡಿಯ ಹೊಳೆದುದರಿಂದ, ರಾಯರು ಸಂತೋಷಚಿತ್ತರಾಗಿ ಬೀದಿಗಿಳಿಯಲಿದ್ದರು. ಅವರ ಆತಿಥೇಯರ ಮಗಳು ಸುಚಿತ್ರಾ ಅವರಿಗೆ ಜಯವನ್ನು ಕೋರಲೆಂದು ಬಂದಳು. ಆಗ ಎದುರು ಮನೆಯ ಕರಿಬಸಕ್ಕ, ರಾಯರ ಕಣ್ಣಿಗೆ ಬಿದ್ದಳು. ರಾಯರು ಸುಚಿತ್ರಾಗೆ ಹೇಳಿದರು. "ಭಾರತೀಯ ಸ್ತ್ರೀಯರು ಸರಿಯಾಗಿ ಮುಖ ತೊಳೆಯುವುದಿಲ್ಲವೆಂದು ಮುನ್ಸಾಸ್ ಹೇಳಿದುದು ನಿಜ. ಅವಳನ್ನು ನೋಡು ಮುಖ ತೊಳೆದಿಲ್ಲ. ತಲೆ ಬಾಚಿಲ್ಲ" ಹೀಗೆಂದು, ರಾಯರು ಹೋಗಿಬಿಟ್ಟರು. ಈ ಸುದ್ದಿಯನ್ನು ಸುಚಿತ್ರಾ ಸ್ನೇಹಲತೆಗೆ ಹೇಳಿದಳು. ಅವಳು ಅರುಣಾಳಿಗೆ. ಅರುಣಾ, ವಿಮಲೆಗೆ. ರಾಯರು ಜಾಣ ಸ್ತ್ರೀಯರ ಬಳಗದ ಮಾನವನ್ನು ಹೆಚ್ಚಿಸಿದರು.

ಅವರೆಲ್ಲ ಕರಿಬಸಕ್ಕ, ಪುಟ್ಟಚೌಡಿ, ನರಸಕ್ಕ ಇತ್ಯಾದಿಗಳನ್ನು ಹೇಳಿದರು. ರಾಯರ ವಾಕ್ಯವನ್ನು ಅವರೆಲ್ಲ ಉದಾಹರಿಸಿದರು.

ಪುಟ್ಟಚೌಡಿ ರೇಗಿದಳು. ಕರಿಬಸಕ್ಕ ಕಿಡಿಕಿಡಿಯಾದಳು. ದಡ್ಡಹೆಂಗಸರು ಜರೂರು ಸಭೆ ಕರೆದರು.

"ರಾಯನಿಗೆ ಓಟು ಕೊಡಬೇಕೆಂದು ನಿರ್ಧರಿಸಿದುದು ನಮ್ಮ ತಪ್ಪು. ಕಂಡ ಕಂಡ ಹೆಂಗಸರನ್ನು ಹೊಯಲು ಇವನಿಗೇನು ಹಕ್ಕು. ಇವನು ಅಯೋಗ್ಯ. ಇವನಿಗೆ ತಕ್ಕ ಶಿಕ್ಷೆಮಾಡಬೇಕು" ಎಂದು ಕರಿಬಸಕ್ಕ ಹೇಳಿದುದನ್ನು, ಪುಟ್ಟಚೌಡಿ, ಸಣ್ಣಮ್ಮ, ಸುಬ್ಬನರಸಿಂಹ ವೆಂಕಟಲಕ್ಷ್ಮಿ, ಇತ್ಯಾದಿಗಳು ಅನುಮೋದಿಸಿದರು. ರಾಯ ಹಿಂತಿರುಗಿ ಬರುವುದು ಸಂಜೆ ಏಳು ಗಂಟೆಗೆ. ಅಷ್ಟು ಹೊತ್ತಿಗೆ ಕಸಪೊರಕೆ, ಮಡಿಕೋಲು, ಲಟ್ಟಣಿಗೆಗಳು ಸಿದ್ಧವಾಗಿರಲಿ. ರಾಯನ ಮರ್ದನ ಮಾಡಿಬಿಡಬೇಕು, ಎಂದು ದಡ್ಡಹೆಂಗಸರು ನಿರ್ಧರಿಸಿದರು. ಇದು ಜಾಣ ಹೆಂಗಸರಿಗೆ ತಿಳಿಯಿತು. ರಾಯರ ರಕ್ಷಣೆಗಾಗಿ ಅವರೆಲ್ಲ ಫ್ಲಿಟ್, ಡಿಕ್ಷ್ನರಿ, ಕ್ರೋಷಾಕಡ್ಡಿಗಳೊಡನೆ ಸಿದ್ಧರಾಗಿರಲು ನಿರ್ಧರಿಸಿದರು. ಏನೇ ಆಗಲಿ ರಾಯರ ಮೇಲೆ ದುರಾಕ್ರಮಣವಾಗುವುದನ್ನು ನಾವು ಸಹಿಸೆವು ಎಂದು ಸುಚಿತ್ರಾ, ಉತ್ಪಲಾ, ಸ್ನೇಹಲತಾ, ಮಾಲಾ, ಪ್ರಿಯದರ್ಶಿನಿ, ಭಾಷಣಗಳನ್ನು ಮಾಡಿದರು.

ಈ ಮಧ್ಯೆ ರಾಸಭೇಶ್ವರನ ಧರ್ಮದರ್ಶಿ ಒಂದು ಹೇಳಿಕೆಯನ್ನು ಹೊರಡಿಸಿ, ಸೆಪ್ಟಂಬರ್ 25 ರಂದು ನಡೆಯಲಿದ್ದ ರಾಸಭೇಶ್ವರನ ರಥೋತ್ಸವವು, ಎಲೆಕ್ಷನ್ ಪ್ರಯುಕ್ತ ಫೆಬ್ರವರಿ ಇಪ್ಪತ್ತೊಂಬತ್ತರಂದೇ ನಡೆಯುವುದರಿಂದ ಆಸ್ತಿಕ ಮಹಾಶಯರೆಲ್ಲ ಸಹಕರಿಸಬೇಕೆಂದು ಕೇಳಿಕೊಂಡ ರಾಸಭೇಶ್ವರನ ಈ ಪ್ರಕಟಣೆ ಫೆಬ್ರವರಿ ಇಪ್ಪತ್ತೆಂಟರ ಬೆಳಿಗ್ಗೆ 8 ಗಂಟೆಗೆ ಹೊರಬಿತ್ತು. ಇದನ್ನು ಓದಿದ ಉಲ್ಲೂಕೇಶ್ವರ ಧರ್ಮದರ್ಶಿ, ಉಲ್ಲೂಕೇಶ್ವರನ ರಥವೂ, ಫೆಬ್ರವರಿ 29 ರಂದೇ ಅನಿವಾರ್ಯವಾಗಿ, ಎಲೆಕ್ಷನ್ ಪ್ರಯುಕ್ತ ನಡೆಯುತ್ತದೆ ಎಂದು ಫೆಬ್ರವರಿ 28 ರ ಪ್ರಾತಃಕಾಲ 9 ಗಂಟೆಗೆ ಪ್ರಕಟಿಸಿದ. ಈ ಉತ್ಸವಗಳು ಅಭೂತಪೂರ್ವವಾಗಿ, ನಭೂತೋ ನಭವಿಷ್ಯತಿಯಾಗಿ ನಡೆಯಲೆಂದು ಭಂಗಿ ಬಸಣ್ಣ, ಬಿಂಕದ ಸಂಕಣ್ಣ ತಲಾ ಐದು ಸಾವಿರ ರೂಪಾಯಿಗಳನ್ನು ತಮ್ಮ ತಮ್ಮ ದೇವರಿಗೆ ಅರ್ಪಿಸಿದರು. ಎರಡು ದೇವಸ್ಥಾನದವರೂ ಬ್ಯಾಂಡು, ಭಜಂತ್ರಿ, ಸೊನಾಯ, ತಳಿರು, ತೋರಣ, ಉಲ್ಲೂಕ ಬಾವುಟ, ಗಾರ್ಧಭ ಬಾವುಟ, ಡೋಲು, ಕಹಳೆ, ಕೊಂಬು, ಕಲಶಗಳನ್ನು ಅಂದೇ ಜಮಾಯಿಸಿದರು. ಆರು ಗಂಟೆಯುವರೆಗೂ ಈ ಸಂಭ್ರಮ ಅವ್ಯಾಹತವಾಗಿ ನಡೆದು, ರಥಾಲಂಕಾರ ಮುಗಿಯಿತು.

ಆರು ಗಂಟೆ ಹೊತ್ತಿಗೆ ಉಲ್ಲೂಕೇಶ್ವರನ ಧರ್ಮದರ್ಶಿಗೆ, 1957 ರ ಫೆಬ್ರವರಿಯಲ್ಲಿ 29 ನೇ ತಾರೀಖು ಇಲ್ಲವೇ ಇಲ್ಲ ಎಂಬ ಜ್ಞಾನೋದಯವಾಯಿತು. ಅವನು

ಬಾರ್ಸ್ರೋ ನನ್ರಾಜ, ಹೊಡಿ ನನ ಸರ್ಧರ. ಈಗಲೇ ತೇರು ಅಂದ. ಪಂಜು ಹಿಡೀರಿ, ಕೊಂಬು ಬಾರ್ಸಿರಿ, ಡೋಲ್ಬಜಾಯ್ಸಿರಿ ಅಂದ ಗೂಗೆ ಪಲ್ಲಕ್ಕಿ, "ಗೂಗೆಗೇ ಓಟು" ಬೋರ್ಡುಗಳನ್ನು ಎತ್ತಿ, ರಥವನ್ನು ತುತೂರಿ ಸಮೇತ ಹತ್ತಿ, "ಜೈ" ಎಂದರು. ರಥ ಹೊರಟಿತು. ಅದರ ತುಂಬಾ ಜನ ಸುತ್ತಲೂ ಜನ. "ಜೈ ಉಲ್ಲೂಕ" ಎಂದು ಮುಗಿಲುಹಳ್ಳಿಯ ಎದೆ ಬಿರಿಯುವಂತೆ ಗರ್ಜಿಸಿ ಮೆರವಣಿಗೆ ಹೊರಟೇಬಿಟ್ಟರು. ಮುಗಿಲು ಹಳ್ಳಿಯ ಶಾಂತಿ ಕದಡಿತು.

ರಾಸಭೇಶ್ವರನ ಭಕ್ತರೂ ಕೂಡ ಜಯಸಿನಾದವನ್ನು ಕೇಳಿದರು ಜೈ ಅಂದರು. ಉಲ್ಲೂಕ ಹೊರಟರೆ ರಾಸಭ ಬಿಟ್ಟಾನೇ? ಕತ್ತೆ ಬಾವುಟ, ಕತ್ತೆಗೇ ಓಟು ಬೋರ್ಡು ಗಳೊಡನೆ ರಾಸಭೇಶ್ವರನ ರಥ ರಭಸದಿಂದ ಹೊರಟಿತು.

**ಓಟು ಯಾರಿಗೆ—ಗೂಗೆ ಬಸಣ್ಣನಿಗೆ**

**ಓಟು ಯಾರಿಗೆ—ಕತ್ತೆ ಸಂಕಣ್ಣನಿಗೆ**

ಹಣ್ಣು ಕಾಯಿ ತಂದ ಭಕ್ತರನ್ನು ರಾಸಭ ಮಾತಾಡಿಸಲಿಲ್ಲ. ಉಲ್ಲೂಕ ಕಡೆ ಗಣ್ಣಿಂದಲೂ ನೋಡಲಿಲ್ಲ. ಮಂಗಳಾರತಿ ಮಾಡಿಸಿಕೊಳ್ಳುತ್ತಾ ನಿಂತರೆ—ಉಲ್ಲೂಕ ಮೊದಲು ಹೋದಾನಲ್ಲ ಎಂದು ರಾಸಭ, ರಾಸಭ ತನಗೆ ಖೋ-ಖೋ ಕೊಟ್ಟಾನಲ್ಲ ಎಂದು ಉಲ್ಲೂಕ.

ರಥಗಳು ಎಚ್ಚರ ತಪ್ಪಿದ ಬೊಂಬ್ಬೆ ಲಾರಿಗಳಂತೆ ನುಗ್ಗಿದವು. ದನಗಳು, ಕಾಗೆಗಳು, ಓಡಿದವು. ಮಕ್ಕಳು ಚೀರಿದರು. ಹೆಂಗಸರು ಮೂರ್ಛಿತರಾದರು. ರಸ್ತೆ ತಗ್ಗುಬಿತ್ತು. ಮರಗಳು ನಡುಗಿದವು ಬ್ರಹ್ಮಾಂಡ ಛಿದ್ರವಾಯ್ತು. ಓಟು ಕತ್ತೆ, ಓಟು ಗೂಗೆ, ಬಸ್ಯ, ಸಂಕ್ಯ, ಇವನಾಪ್ನ, ಕಳ್ಳನಮಗ, ನುಗ್ಗೋ, ಹಿಡಿಯೋ, ಹೊಡೆಯೋ, ಎಂದು ಭಕ್ತರು ಅರಿಚಿದರು. ಗಂಟೆಯು ಗುಡುಗಿದವು, ರಥಗಳು ಎಚ್ಚರ ತಪ್ಪಿದವು.

ಹೀಗೆ ಓಡುವ ರಥಗಳು ಸ್ವಪ್ನ ಸುಂದರಿ ಬೀದಿಗೆ ನುಗ್ಗಿದವು. ಬೀದಿಯ ನಡುವೆ ರಾಯರು, ದಿನ ಕೊನೆಯ ಭಾಷಣಮಾಡಲೆಂದು ಬಂದು ನಿಂತಿದ್ದರು. "ಜೈ ಸ್ವಪ್ನ ಸುಂದರಿ" ಎಂದಿದ್ದರು. ಅವರ ಸುತ್ತಲೂ ರೋಡ್ ಸೈಡ್ ರೋಮಿಯೋ ಜೂಲಿಯೆಟ್‌ಗಳು ಕಿಕ್ಕಿರಿದಿದ್ದರು. ರಾಯರನ್ನು ರಕ್ಷಿಸಲು ಜಾಣ ಹೆಂಗಸರೂ, ಭಕ್ಷಿಸಲು ದಡ್ಡಹೆಂಗಸರೂ ಆಯುಧಗಳ ಸಮೇತ ರಸ್ತೆಯ ಇಕ್ಕೆಲದ ಮನೆಗಳ ಕಟ್ಟೆ, ಅಟ್ಟಗಳ ಮೇಲೆ ಸಜ್ಜಾಗಿ ನಿಂತಿದ್ದರು. ರಥಗಳು ನುಗ್ಗಿದರೂ ರಾಯರ ಅನುಯಾಯಿ ಗಳು ಕದಲಲಿಲ್ಲ. ಟ್ರಾಫಿಕ್, ಜಾಂ ಆಯ್ತು. ಜಾಣ ಹೆಂಗಸರು ದಡ್ಡ ಹೆಂಗಸರ



ಕ್ಕೈ ಮುರಿಯಲು ಎಸೆದ ಡಿಕ್ಷ್ನರಿಗಳಿಂದ ಉಲ್ಲೂಕೇಶ್ವರನ ಭಕ್ತರು ಮೂರ್ಛಿತರಾದರು. ದಡ್ಡ ಹೆಂಗಸರ ಲಟ್ಟಣಿಕೆಗಳು ರಾಸಭೇಶ್ವರನ ಭಕ್ತರ ತಲೆಗಳನ್ನೊಡೆದವು. ರಾಸಭೇಶ್ವರನ ಭಕ್ತರು ಇಡಿಗಾಯಿ, ಉತ್ತತ್ತಿ, ಕಲ್ಲುಗಳಿಂದ ಉಲ್ಲೂಕೇಶ್ವರನ ರಥವನ್ನು ತಾಕಿದರು. ಉಲ್ಲೂಕ ಭಕ್ತರು, ಇಡಿಗಾಯಿ, ಉತ್ತತ್ತಿ, ಕಲ್ಲುಗಳಿಂದ ರಾಸಭೇಶ್ವರನ ರಥವನ್ನು ಮರ್ದಿಸಿದರು. ರಥಾಗ್ರದಲ್ಲಿ ನಿಂತ ಪ್ರಚಾರಕರು ಕೆಳಗುರುಳುವಂತಾದರು. ರಥ ಮಧ್ಯದಲ್ಲಿ ಕುಳಿತ ಸಂಕಣ್ಣ ಬಸಣ್ಣನವರ ಮೂಗುಗಳೊಡೆದವು. ಕತ್ತೇಕಿ ಜೈ, ಗೂಗೇಕಿ ಜೈ ಎಂದರು. ಸ್ವಪ್ನಸುಂದರಿ ಬೀದಿಯ ಮನೆಗೋಡೆಗಳು ಬಿರಿದವು.

ಅಷ್ಟರಲ್ಲಿ ಉಲ್ಲೂಕೇಶ್ವರ, ರಾಸಭೇಶ್ವರ ಪೂಜಾರಿಗಳು ಉತ್ಸವ ಮೂರ್ತಿಗಳನ್ನು ಹಿಡಿದುಕೊಂಡು ಓಡಿಬಂದರು. ಹೊರಡುವ ಅವಸರದಲ್ಲಿ ರಥದಲ್ಲಿ ಮೂರ್ತಿಗಳನ್ನು ಇಟ್ಟಿರಲಿಲ್ಲ. ಎಕ್ಸ್‌ಟೆನ್ಷನಿನ ಜನರೆಲ್ಲ ನೆರೆದರು. ಏನಾಯಿತು, ಯಾಕಾಯಿತು, ಯಾರಿಗೂ ತಿಳಿಯದು. ದೊಂಬಿ, ರಂಪ, ರಾದ್ಧಾಂತ, ಕೋಲಾಹಲ.

ಪೋಲೀಸರು ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ತಹಬಂದಿಗೆ ತರಲು ಎರಡು ಗಂಟೆ ತೆಗೆದುಕೊಂಡರು.

ಕತ್ತೆಯ ಗುರುತಿಗೇ ಓಟು ಕೊಡಲು ನಿರ್ಧರಿಸಿದ್ದ, ರಾಸಭಾಧಿಪತಿಗಳು ಈಗ ಕೊಡಕೂಡದೆಂದು ನಿರ್ಧರಿಸಿದ್ದಾರೆ. ಕತ್ತೆಗಳ ಮೆರವಣಿಗೆ ಪ್ರತಿದಿನವೂ ನಡೆಯ

ಬೇಕೆಂದು ಬಿಂಕದ ಸಂಕಣ್ಣ ನಿರ್ಧರಿಸಿದಾನೆ. ಆವನ ಏಜಂಟರು ಗಲ್ಲಿಗಲ್ಲಿಗೂ ನುಗ್ಗಿ, ಬೀದಿಯ ಬೂದಿಯಲ್ಲಿ ಹೊರಳುವ ಕತ್ತೆಗಳನ್ನು ಮೂಗುದಾರ ಹಾಕಿ, ಹಿಂಗಾಲು ಕಟ್ಟಿ, ಎಳೆತರುತ್ತಿದಾರೆ. ಇದರಿಂದ ಇಸ್ತ್ರಿ ಬಟ್ಟೆಗಳೇ ಇಲ್ಲವಾಗಿ, ಆದರಿಂದ ನೊಂದ ಮಧ್ಯಮ ವರ್ಗದ ಜನ ರಾಯನಿಗೇ ಬೆಂಬಲ ಕೊಡಲು ಯೋಚಿಸುತ್ತಿದಾರೆ.

ಗೂಗೆ ಪಲ್ಲಕ್ಕಿಗಳ ಮೆರವಣಿಗೆ, ಈ ಕತ್ತೆ ಮೆರವಣಿಗೆಯನ್ನು ವಿಚಾರಿಸಬೇಕೆಂದು ಭಂಗಿ ಬಸಣ್ಣ ನಿರ್ಧರಿಸಿದಾನೆ. ಮುಗಿಲುಹಳ್ಳಿ ಜಿಲ್ಲೆಯ ಮೂಲೆ ಮೂಲೆಗೂ ಗೂಗೆ ಬೇಟೆಗಾರರನ್ನು ಅವನು ಕಳಿಸಿದಾನೆ. ಗೂಗೆ ಬೇಟೆಯಾಡುವ ಉಪಕರ್ಣ ನಿಮಗಿದ್ದರೆ ಮುಗಿಲು ಹಳ್ಳಿಗೆ ಬಂದು ನೀವು ದುಡ್ಡು ಗಳಿಸಬಹುದು.

ಆದರೆ ರಾಯನಿಗೆ ಬೇರೆ ಸೌಲಭ್ಯಗಳಿವೆ. ಅವನ ಗುರ್ತು "ಸುಂದರ ಸ್ತ್ರೀ" "ಸ್ವಪ್ನ ಸುಂದರಿಗೇ ಓಟು ಕೊಡಿ" ಎಂಬುದೇ ಅವನ ಪ್ರಚಾರ. ಆದಕ್ಕೆ ಮರುಳಾಗದವರಾರು. ದಡ್ಡ ಹೆಂಗಸರ ಬಳಗದೊಂದಿಗೆ ಸಂಧಾನವನ್ನಾರಂಭಿಸಿದಾನೆ.

ದೇಶದ ದೃಷ್ಟಿ ಮುಗಿಲುಹಳ್ಳಿ (ವೆಸ್ಟ್) ಕಡೆಗೆ ಕೇಂದ್ರೀಕೃತವಾಗಿದೆ. ಮಾರ್ಚ್ ೬ಕ್ಕೆ ಚುನಾವಣೆ ನಡೆಯಲಿದೆ. ನಮ್ಮೂರ ಜನ "Mad as a March hare" ಆಗಿದಾರೆ. ಮುಂದೇನು ? ಕಾದುನೋಡುತ್ತಿದೇವೆ.

— ಅ. ರಾ. ಸೇ.




ಬಸ್ ಬರೋ ಹೊತ್ತಿಗೆ ನಮ್ಮ ಕಾಮಾಕ್ಷಿ ಓಟು ಗಿಟ್ಟಿಸಿದ ಕತೆ ಹೇಳ್ತೀನಿ !

ಏಪ್ರಿಲ್ ತಿಂಗಳಲ್ಲಿ ಬಿಡುಗಡೆ

ಪ್ರಕಾಶ್‌ರವರ

# ಅಮೋಘವಾದ

# ಕನ್ನಡ ಚಿತ್ರ

# ? ?

ಹಂಚಿಕೆ:

ವಿಕ್ರಮ್ ಪಿಕ್ಚರ್ಸ್

ಗಾಂಧಿನಗರ - - ಬೆಂಗಳೂರು-೯.

# ಅನುಭವದಿಂದ ಬಂದ ಜ್ಞಾನ

ಶ್ರೀಗಂಧದ ಮರಗಳನ್ನು ಸಮೃದ್ಧವಾಗಿ ಬೆಳೆಸುವುದರ ರಹಸ್ಯವು ನೂರಾರು ವರ್ಷಗಳ ಅನುಭವವಾದ ಮೇಲೂ ಕೂಡಾ ಇನ್ನೂ ಮೈಸೂರು ಸೀಮೆಯೊಂದರ ವಶದಲ್ಲಿಯೇ ಇರುವ ಸ್ವತ್ತಾಗಿದೆ. ಮೈಸೂರು ಸರಕಾರದ ಕಾರ್ಖಾನೆಗಳಲ್ಲಿ ಬಟ್ಟಿಯಿಳಿಸಿದ ಅತ್ಯಂತ ಮನೋಹರವಾದ ಪರಿಮಳವುಳ್ಳ ಶ್ರೀಗಂಧದ ಎಣ್ಣೆಯೇ ಪ್ರಪಂಚದಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದದ್ದು. ಈ ಎಣ್ಣೆಯು ಸರ್ವ ಸಮರ್ಪಕವಾದ ಸ್ಥಳ ಸನ್ನಿವೇಶದಲ್ಲಿ ಬೆಳೆದು ಕಡಿದು ಕೂಡಿಟ್ಟ ಶ್ರೀಗಂಧದ ಮರದಿಂದ ತಯಾರಾದದ್ದು. ಅದರ ಸುವಾಸನೆಯು ಮರದಲ್ಲಿ ಸಾಕ್ಷಾತ್ತಾಗಿರುವ ಎಣ್ಣೆಯದು ಹೇಗೆಯೋ ಹಾಗೆಯೇ ತುಂಬಿಕೊಂಡು ಸ್ವಲ್ಪವೂ ಕುಂದದೆ ಇರುತ್ತದೆ. ಲೋಕದಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಸಾಬೂನುಗಳ ಮತ್ತು ಪರಿಮಳ ದ್ರವ್ಯಗಳ ತಯಾರಿಕೆಯಲ್ಲಿ ಈ ಸುವಾಸನೆ ಉಪಯುಕ್ತವಾಗುತ್ತದೆ.

★

## ಮೈಸೂರು ಶ್ರೀಗಂಧದ ತೈಲ

★

**ಗವರ್ನಮೆಂಟ್ ಸ್ಯಾಂಡಲ್‌ಉಡ್ ಆಯಿಲ್ ಫ್ಯಾಕ್ಟರಿ,**
**ಮೈಸೂರು.**